ಬೆಲೆ ರೂ.2.50
D.O.P - 15th of every month at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಫೆಬ್ರವರಿ 2016

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-16 ಸಂಚಿಕೆ-2 ಪುಟಗಳು-10 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಇಪ್ಪತ್ನಾಲ್ಕನೇ ವರ್ಷದ ಶ್ರೀ ಶಾರದಾ ಕ್ರಿಕೆಟ್ ಟ್ರೋಫಿ






ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಇದರ ಯುವ ವೇದಿಕೆಯ ಆಶ್ರಯದಲ್ಲಿ ಸತತ 24ನೇ ವರ್ಷದ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯು ತಾ.24-01-2016ರಂದು ಉಡುಪಿಯ ಎಂ.ಜಿ.ಎಂ ಕಾಲೇಜಿನ ಗ್ರೌಂಡ್‌ನಲ್ಲಿ ಜರುಗಿತು. ನಮ್ಮ ಸಮಾಜ ಬಾಂಧವರಿಗಾಗಿ ಜರಗುವ ಈ ಕ್ರೀಡೋತ್ಸವದಲ್ಲಿ ರಾಜ್ಯದಾದ್ಯಂತದಿಂದ ಬಂದ ಯುವಕರು ಆಸಕ್ತಿಯಿಂದ ಭಾಗವಹಿಸಿದರು.

ಬೆಳಿಗ್ಗೆ 8 ಗಂಟೆಯ ಉಪಾಹಾರದ ನಂತರ ಕ್ರೀಡಾಂಗಣದಲ್ಲಿ ಡಾ। ಪಿ.ಜಿ.ರಾವ್, ಮುಂಬಯಿ ಹಾಗೂ ಶ್ರೀ ಫಾಲಚಂದ್ರರಾವ್ ಇವರುಗಳು ಸಂಘದ ಅಧ್ಯಕ್ಷರಾದ ಶ್ರೀ ವೈ.ಭುವನೇಂದ್ರ ರಾವ್, ಉಪಾಧ್ಯಕ್ಷರುಗಳು, ಕಾರ್ಯದರ್ಶಿ ಕೋಶಾಧಿಕಾರಿ ಹಾಗೂ ಯುವವೇದಿಕೆಯ ಉಂಡಾರು ಶ್ರೀ ಕೃಷ್ಣಾನಂದ ರಾವ್, ಶ್ರೀ ವಸಂತ ರಾವ್ ಕರಂಬಳ್ಳಿ, ಇವರೆಲ್ಲರ ಉಪಸ್ಥಿತಿಯಲ್ಲಿ ಪಾರಿವಾಳ ಹಾಗೂ ಬಲೂನುಗಳನ್ನು ಹಾರಿಬಿಡುವ ಮೂಲಕ ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಡಾ। ಪಿ.ಜಿ. ರಾಯರು ಯುವಕರ ಕ್ರೀಡಾ ಮನೋಭಾವನೆಯನ್ನು ಮೆಚ್ಚಿ ರೂ.10,000 ಗಳ ಕೊಡುಗೆಯನ್ನು ಸಂಘಕ್ಕೆ ನೀಡಿ ಕ್ರೀಡಾ ನಿಧಿಯನ್ನು ಸ್ಥಾಪಿಸುವಂತೆ ವಿನಂತಿಸಿದರು. ಉಡುಪಿ, ಪಡುಬಿದ್ರಿ, ಬಾರ್ಕೂರು, ನಂದಳಿಕೆ, ಸುರತ್ಕಲ್, ಕಬ್ಬಿನಾಲೆ, ಕುಂದಾಪುರ ಹಾಗೂ ಬೆಂಗಳೂರಿನಿಂದ ಒಟ್ಟು 11 ತಂಡಗಳು ಭಾಗವಹಿಸಿದ್ದವು. ಇವುಗಳಲ್ಲಿ ಬೆಂಗಳೂರು, ಉಡುಪಿ, ಪಡುಬಿದ್ರಿ ಹಾಗೂ ಬಾರ್ಕೂರು ತಂಡಗಳು ಸೆಮಿಫೈನಲ್ ಪ್ರವೇಶಿಸಿದವು.

**ಅಪರಾಹ್ನದ ನಂತರ ನಡೆದ ಫೈನಲ್‌ನಲ್ಲಿ ಎಫ್.ಡಬ್ಲ್ಯು.ಎಫ್. ಬೆಂಗಳೂರು ತಂಡವು ಮೊದಲ ಸ್ಥಾನವನ್ನು, ಪಡುಬಿದ್ರಿ ತಂಡವು ದ್ವಿತೀಯ ಸ್ಥಾನವನ್ನು ಪಡೆಯಿತು. ಅತ್ಯುತ್ತಮ ದಾಂಡಿಗನಾಗಿ ಕೆ. ಕೃಷ್ಣರಾವ್ (ಪಡುಬಿದ್ರಿ ತಂಡ), ಅತ್ಯುತ್ತಮ ಬೌಲರ್ ಆಗಿ ದೀಕ್ಷಿತ್ ವಿ.ರಾವ್ (ಎಫ್‌ಡಬ್ಲ್ಯು ಎಫ್ ಬೆಂಗಳೂರು ತಂಡ) ಹಾಗೂ ಅತ್ಯುತ್ತಮ ಆಲ್‌ರೌಂಡರ್ ಆಗಿ ಗುರುರಾಜ ರಾವ್ (ಎಫ್.ಡಬ್ಲ್ಯು.ಎಫ್. ಬೆಂಗಳೂರು ತಂಡ) ಮೂಡಿ ಬಂದರು.**

ಸಂಜೆ ನಡೆದ ಬಹುಮಾನ ವಿತರಣಾ ಸಮಾರಂಭದಲ್ಲಿ ಕುಮಾರಿ ವಿಜೇತಳ ಪ್ರಾರ್ಥನೆಯ ನಂತರ ಡಾ। ವೈ. ಸುದರ್ಶನ ರಾಯರು ಅತಿಥಿಗಳನ್ನು ಸ್ವಾಗತಿಸಿದರು. ಮುಖ್ಯ ಅತಿಥಿಯಾಗಿ ಲೋಕಾಯುಕ್ತ ಸ್ಪೆಷಲ್ ಇನ್ವೆಸ್ಟಿಗೇಶನ್ ಟೀಂನ ಇನ್‌ಸ್ಪೆಕ್ಟರ್ ಹಾಗೂ ಎವರೆಸ್ಟ್ ಏರಿದ ಖ್ಯಾತಿವೆತ್ತ ಶ್ರೀ ಪಿ.ಎನ್ ಗಣೇಶ್ ಆಗಮಿಸಿದ್ದರು. ತಾನು ಎವರೆಸ್ಟ್ ಏರಲು ಮಾಡಿದ ಪ್ರಯತ್ನಗಳನ್ನೂ ವಿವರಿಸಿ ಯುವಕರಿಗೆ ಎಲ್ಲಾ ರಂಗಗಳಲ್ಲೂ ಸಾಧನೆ ಮಾಡಿ ಮುಂಚೂಣಿಯಲ್ಲಿ ಬರಲು ಕರೆ ಇತ್ತರು. ಶ್ರೀ ಸಿ.ಎಸ್.ರಾವ್ ಮುಂದಿನ ವರ್ಷ 25 ನೇ ವರ್ಷ ಟ್ರೋಫಿ ನಡೆಯಲಿರುವುದರಿಂದ ಕನಿಷ್ಠ 25 ತಂಡಗಳು ಭಾಗವಹಿಸುವಂತೆ ಮಾಡಲು ಕರೆಯಿತ್ತರು. ಶ್ರೀ ವೈ.ಭುವನೇಂದ್ರ ರಾವ್‌ರವರು ಭಾಗವಹಿಸಿದ ಹಾಗೂ ಕ್ರೀಡೋತ್ಸವವನ್ನು ಯಶಸ್ವಿಗೊಳಿಸಿದ ಕಾರ್ಯಕರ್ತರಿಗೆ ಅಭಿನಂದನೆಗಳನ್ನು ಸಲ್ಲಿಸಿದರು, ದಾನಿಗಳಾದ ಅಲೆವೂರು ಶ್ಯಾಮರಾವ್ ಹಾಗೂ ಶ್ರೀ ಬಿ. ಹೆಚ್. ರಾಘವರಾಯರಿಗೆ ಧನ್ಯವಾದ ಸಲ್ಲಿಸಿದರು. ಶ್ರೀ ಐ.ಕೆ. ಜಯಚಂದ್ರ ಧನ್ಯವಾದವಿತ್ತರು. ಶ್ರೀ ಹೆರ್ಗ ನಿರಂಜನ ರಾವ್ ಕಾರ್ಯಕ್ರಮವನ್ನು ನಿಯೋಜಿಸಿದ್ದರು.


## ಮಹಿಳಾ ವೇದಿಕೆಯಿಂದ ವಿವಿಧ ಒಳಾಂಗಣ ಕ್ರೀಡೆಗಳು



ತಾ.24-01-2016 ಎಂ.ಜಿ.ಎಂ ಗ್ರೌಂಡನಲ್ಲಿ ಕ್ರಿಕೆಟ್ ನಡೆಯುತ್ತಿದ್ದಂತೆ ಶ್ರೀ ಶಾರದಾ ಮಂಟಪದಲ್ಲಿ ಮಹಿಳಾ ವೇದಿಕೆಯು ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರಿಗಾಗಿ ವಿವಿಧ ಒಳಾಂಗಣ ಕ್ರೀಡೆಗಳನ್ನು ಆಯೋಜಿಸಿತ್ತು. ಸಮಾಜ ಭಾಂದವರು ಉತ್ಸಾಹದಿಂದ ಈ ಕ್ರೀಡೋತ್ಸವದಲ್ಲಿ ಭಾಗವಹಿಸಿ ಮನೋರಂಜನೆಯನ್ನು ಪಡೆದರು. ಚಮಚದಲ್ಲಿ ನಿಂಬೆಇಟ್ಟು ನಡೆಯುವುದು, ಧಾನ್ಯಗಳನ್ನು ಗುರುತಿಸುವುದು, ಕಂಬಕ್ಕೆ ರಿಂಗ್ ಹಾಕುವುದು ಇತ್ಯಾದಿ ಸ್ಪರ್ಧೆಗಳಲ್ಲಿ ಭಾಗವಹಿಸಿದವರು, ಸುತ್ತಲೂ ನಿಂತು ಪ್ರೋತ್ಸಾಹಿಸಿದವರು ಸೇರಿ ಹಬ್ಬದ ವಾತಾವರಣವನ್ನೂ ಉಂಟುಮಾಡಿದರು. ಅಪರಾಹ್ನದ ಭೋಜನದ ನಂತರ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಉಡುಪಿ ತಾಲೂಕು ವೈದಾಧಿಕಾರಿ ಡಾ ನಾಗರತ್ನ ಹಾಗೂ ಲೋನಂದದ ಹೊಟೇಲ್ ಉದ್ಯಮಿ ಶ್ರೀ ವಿಶ್ವನಾಥ ಶ್ಯಾನುಭೋಗರ ಪತ್ನಿ ಶ್ರೀಮತಿ ಜಯಶ್ರೀ ಆಗಮಿಸಿದ್ದರು. ಅತಿಥಿಗಳು ಬೆಳಗ್ಗಿನಿಂದ ನಡೆದ ಮೋಜಿನ ಪಂದ್ಯಾಟಗಳಲ್ಲಿ ವಿಜೇತರಿಗೆ ಬಹುಮಾನವನ್ನು ವಿತರಿಸಿದರು.

ಡಾ.ನಾಗರತ್ನರವರು ಈ ರೀತಿಯ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೆ ಪೂರಕ ಎಂದು ವಿವರಿಸಿದರು. ಶ್ರೀ ವೈ ಭುವನೇಂದ್ರರಾವ್ ರವರು ಇಂದೊಂದು ಕ್ರೀಡೋತ್ಸವ, ಇದನ್ನು ಇನ್ನೂ ಅದ್ದೂರಿಯಾಗಿ ಮುಂದಿನ ವರ್ಷ ಜರುಗಿಸುತ್ತೇವೆ ಎಂದರು. ಶ್ರೀಮತಿ ವಿದ್ಯಾ ಸ್ವಾಗತಿಸಿ ಶ್ರೀಮತಿ ಉಷಾ ಶ್ಯಾನುಭಾಗ್ ವಂದಿಸಿದರು. ಕುಮಾರಿ ವೃಂದ ಕಾರ್ಯಕ್ರಮ ನಿರ್ವಹಿಸಿದರು. ಶ್ರೀಮತಿ ಭುವನೇಶ್ವರಿ ಪ್ರಾರ್ಥನೆ ಮಾಡಿದರು. ಶ್ರೀಮತಿ ಪ್ರತಿಭಾ ಭಂಡಿ, ಶ್ರೀಮತಿ ಸುನೀತಾ, ಶ್ರೀಮತಿ ರಜನಿ, ಶ್ರೀಮತಿ ಪ್ರತಿಭಾ ಶ್ರೀಧರ್, ಶ್ರೀಮತಿ ನಾಗವಲ್ಲಿ, ಶ್ರೀಮತಿ ಜಯಲಕ್ಷ್ಮೀ ಮುರಲೀಧರ್, ಶ್ರೀಮತಿ ಮೀರಾ ರಾಜೇಶ್, ಶ್ರೀಮತಿ ಹರಿಣಾಕ್ಷಿ ನಾಗರಾಜ್ ಇವರುಗಳು ಪಂದ್ಯಾಟವನ್ನು ನಿರ್ವಹಿಸಿದರು.

## ಶ್ರೀ ಶಾರದಾ ಮಂಟಪಕ್ಕೆ ಪರ್ಯಾಯ ಶ್ರೀ ಶ್ರೀ ಗಳ ಭೇಟಿ



ಉಡುಪಿ ಶ್ರೀಕೃಷ್ಣನ ಪೂಜಾ ಕೈಂಕರ್ಯವನ್ನು ಐದನೇ ಬಾರಿಗೆ ಸ್ವೀಕರಿಸುತ್ತಿರುವ ಪರಮಪೂಜ್ಯ ಹಿರಿಯ ಪೇಜಾವರ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಕೋರಿಕೆಯನ್ನು ಮನ್ನಿಸಿ ತಾ.15-01-2016ರ ಮಕರ ಸಂಕ್ರಾತಿಯಂದು ಶ್ರೀಶಾರದಾ ಮಂಟಪಕ್ಕೆ ಭೇಟಿಯಿತ್ತು ಶ್ರೀ ಶಾರದಾ ದೇವಿಗೆ ಪೂಜೆಗೈದು, ಪಾದ ಪೂಜೆ ಸ್ವೀಕರಿಸಿ, ಫಲ ಮಂತ್ರಾಕ್ಷತೆ ವಿತರಿಸಿ ಆಶೀರ್ವದಿಸಿದರು.

ವಿಪ್ರರೊಳಗೆ ಯಾವುದೇ ರೀತಿಯ ಭೇದಭಾವ ತಾರತಮ್ಯ ಸಲ್ಲದು. ಎಲ್ಲರೂ ಪರ್ಯಾಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀಕೃಷ್ಣನ ಕೃಪೆಗೆ ಪಾತ್ರರಾಗಲಿ ಎಂದು ವಿದ್ಯುಕ್ತವಾಗಿ ಅಧ್ಯಕ್ಷರಾದ ಶ್ರೀ ಭುವನೇಂದ್ರ ರಾಯರಿಗೆ ಫಲಮಂತ್ರಾಕ್ಷತೆ ಸಹಿತ ಆಮಂತ್ರಣವಿತ್ತು ಆಹ್ವಾನಿಸಿದರು. ಅಂತೆಯೇ ಪರ್ಯಾಯದ ಕಾರ್ಯಕ್ರಮಗಳಲ್ಲಿ ನಮ್ಮ ಸಮಾಜಬಾಂಧವರು ಭೋಜನ ವ್ಯವಸ್ಥೆಯಲ್ಲಿ ಕಾರ್ಯಕರ್ತರಾಗಿ ಭಾಗವಹಿಸಿದ್ದರು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 576 102.**

॥ ಶಾರದಾ ಶಾರದಾಂಭೋಜ ವದನಾ ವದನಾಂಬುಜೇ ಸರ್ವದಾ ಸರ್ವದಾಸ್ಮಾಕಂ ಸನ್ನಿಧಿಃ ಸನ್ನಿಧಿಂ ಕ್ರಿಯಾತ್ ॥



### ಕರೆಯೋಲೆ

ಪ್ರಿಯರೇ,

ಸ್ವಸ್ತಿ! ಶ್ರೀ ಜಯ ನಾಮ ಸಂ।ರದ ಮೀನ ಮಾಸ ದಿನ ೧ ಸಲುವ ಫಾಲ್ಗುಣ ಬಹುಳ ಷಷ್ಠಿ ಮೀನ ಸಂಕ್ರಮಣ ತಾ.14-03-2016ನೇ ಸೋಮವಾರ

**ಶ್ರೀ ಶಾರದಾ ದೇವಸ್ಥಾನದ ಪ್ರತಿಷ್ಠಾ ವರ್ಧಂತಿಯು**

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗಲಿರುವುದು. ಈ ಪುಣ್ಯ ಸಮಾರಂಭಕ್ಕೆ ತಾವೆಲ್ಲರೂ ಬಂದು, ಭಾಗವಹಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

ಕೆ. ಸುರೇಶ್ ರಾವ್
ಕಾರ್ಯದರ್ಶಿ

ವೈ. ಭುವನೇಂದ್ರ ರಾವ್
ಅಧ್ಯಕ್ಷರು

*ಕಾರ್ಯಕ್ರಮ : ಬೆಳಿಗ್ಗೆ ಗಂಟೆ 8-00ರಿಂದ ಗಣಹೋಮ, ರುದ್ರಾಭಿಷೇಕ, ಶ್ರೀಚಕ್ರ ಪೂಜೆ, ಮಧ್ಯಾಹ್ನ ಗಂಟೆ 12-00ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಬ್ರಾಹ್ಮಣ ಸುವಾಸಿನೀ ಆರಾಧನೆ ಮತ್ತು ಅನ್ನಸಂತರ್ಪಣೆ*

# ಸಂಪಾದಕೀಯ.....

– ಡಾ| ವೈ. ಸುದರ್ಶನ್ ರಾವ್

ಸ್ಥಾನಿಕ ಬ್ರಾಹ್ಮಣರು ಸಾವಿರಾರು ವರ್ಷಗಳ ಮೊದಲು ಪಶ್ಚಿಮ ಕರಾವಳಿಗೆ ವಲಸೆ ಬಂದು ನೆಲೆಸಿದ ಮೊದಲ ಬ್ರಾಹ್ಮಣರು. ಇಲ್ಲಿನ ಬ್ರಾಹ್ಮಣ ಸಂಸ್ಕೃತಿಯ ಮೂಲ ಪುರುಷರು. ಇದು ತುಳುನಾಡಿನ ಇತಿಹಾಸದಲ್ಲಿ ಅಡಗಿರುವ ಸತ್ಯ. ಆದರೆ ಕೇವಲ ಎರಡು ಶತಮಾನಗಳ ಹಿಂದೆ ನಮಗೆ ದಿವಾನ, ಶ್ಯಾನುಭೋಗ ಇತ್ಯಾದಿ ಉನ್ನತ ಹುದ್ದೆಗಳ ಆಶ್ರಯಕೊಟ್ಟಿದ್ದ ರಾಜ ಮಹಾರಾಜರನ್ನು ಬೆಂಬಲಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದುದಕ್ಕೆ ಬ್ರಿಟಿಷರ ಅವಕೃಪೆಗೆ ಒಳಗಾಗಿ ನಾವು ದೇವಸ್ಥಾನ ಹಾಗೂ ಆಡಳಿತಗಳಲ್ಲಿದ್ದ ಉನ್ನತ ಹುದ್ದೆಗಳನ್ನು ಕಳೆದುಕೊಂಡು ತಾತ್ಕಾಲಿಕ ಹಿನ್ನಡೆ ಅನುಭವಿಸಿದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ''ಹಳ್ಳಕ್ಕೆ ಬಿದ್ದವನ ಮೇಲೆ ಆಳಿಗೊಂದು ಮುಷ್ಟಿಮಣ್ಣು'' ಎಂಬ ಗಾದೆಯಂತೆ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಮೇಲೆ ಬಂದವರು ಅನೇಕರು. ಅವರಲ್ಲಿ ಕೆಲವರು ಸ್ಥಾನಿಕರ ಬಗ್ಗೆ ಕಪೋಲಕಲ್ಪಿತ ಕಥೆಗಳನ್ನು ಕಟ್ಟಿ ಹರಿಯಬಿಟ್ಟದ್ದು ಈಗ ಇತಿಹಾಸ. ಈಗ ಇಪ್ಪತ್ತೊಂದನೆಯ ಶತಮಾನದಲ್ಲಿ ಅಂತರ್ಜಾಲಯುಗದಲ್ಲಿ ಈ ಕಪೋಲಕಲ್ಪಿತ ಕಥೆಗಳ ಇತಿಹಾಸ ಮರುಕಳಿಸುತ್ತಿದೆಯೇನೋ ಎನ್ನುವಂತಹ ಘಟನೆ ವರದಿಯಾಗಿದೆ. ಅಂತರ್ಜಾಲದಲ್ಲಿ ಇಂತಹ ಕಥೆಯೊಂದು ಸ್ಥಾನಿಕರ ಬಗ್ಗೆ ಪ್ರಕಟವಾಗಿದೆ, ಅದೂ ಸರ್ಕಾರಿ ಕೃಪಾಪೋಷಿತ ವೆಬ್‌ಸೈಟ್ ಒಂದರಲ್ಲಿ.

ಹಂಪಿ ವಿಶ್ವವಿದ್ಯಾಲಯವು ಸಿದ್ಧಪಡಿಸಿ ಹಸ್ತಾಂತರಿಸಿರುವ ಕರ್ನಾಟಕ ಸರ್ಕಾರದ ಕನ್ನಡ ಹಾಗೂ ಸಂಸ್ಕೃತಿ ಇಲಾಖೆಯ ಸುಪರ್ದಿಯಲ್ಲಿರುವ ಕರ್ನಾಟಕ ಜ್ಞಾನ (?) ಆಯೋಗವೆಂಬ ಇಲಾಖೆಯ ಅಂತರ್ಜಾಲ ಪುಟ https:/kanaja.in/archives/116438ದಲ್ಲಿ ಸ್ಥಾನಿಕ ಬ್ರಾಹ್ಮಣರೆಲ್ಲರೂ ಒಕ್ಕೊರಳಲ್ಲಿ ಪ್ರತಿಭಟಿಸಲೇ ಬೇಕಾದ ಆಕ್ಷೇಪಾರ್ಹ ಒಕ್ಕಣೆಯೊಂದು ಪ್ರಕಟವಾಗಿದೆ. ಈ ಒಕ್ಕಣೆಯು ಆ ಸಂಸ್ಥೆಯ ಯಾವನೇ ಒಬ್ಬ ವ್ಯಕ್ತಿಯು ಸ್ವತಃ ಸ್ಥಾನಿಕರಿದ್ದ ಸ್ಥಳಕ್ಕಾಗಲೀ, ದೇವಸ್ಥಾನಗಳಿಗಾಗಲೀ ಅಥವಾ ಮುಖಂಡರು ಯಾ ಸಂಘ ಸಂಸ್ಥೆಗಳನ್ನಾಗಲೀ ಭೇಟಿಯಾಗಿ ಸ್ಥಾನಿಕರ ಬಗ್ಗೆ ಅಧ್ಯಯನ ಮಾಡಿ ಸಿದ್ಧಪಡಿಸಿದ ಮಾಹಿತಿಯಾಗಿರದೇ, ಕುಳಿತಲ್ಲೇ ಇದರಂತದ್ದೇ ಇನ್ನೆರಡು ಅಂತರ್ಜಾಲದ ಪುಟಗಳಲ್ಲಿ ಕೈಯಾಡಿಸಿ, ಭಟ್ಟಿ ಇಳಿಸಿ ತಯಾರಿಸಿದ ಸುಳ್ಳು ಮಾಹಿತಿಯಾಗಿದೆ. ಇದೊಂದು ಪ್ರಮಾದವಲ್ಲದೇ ಬೇರೇನಲ್ಲ.

ಈ ಒಕ್ಕಣೆಯನ್ನು ಪ್ರತಿಭಟಿಸಿ ಈಗಾಗಲೇ ನಮ್ಮ ಸಮಾಜದ ಅನೇಕ ಗಣ್ಯರು ಹಾಗೂ ಮುಂದಾಳುಗಳು ತಮ್ಮ ಪ್ರತಿಭಟನೆಯನ್ನು ಸೂಚಿಸಿ ಆದ ಪ್ರಮಾದವನ್ನು ಸರಿಪಡಿಸುವಂತೆ ಪತ್ರ ಬರೆದಿರುತ್ತಾರೆ. ಆದರೂ ಜ್ಞಾನ ಆಯೋಗದವರು ಇನ್ನೂ ಎಚ್ಚರಗೊಂಡಂತೆ ತೋರುತ್ತಿಲ್ಲ. ಹಾಗಾಗಿ ನಾವು ನಮ್ಮ ಪ್ರತಿಭಟನೆಯನ್ನು ಇನ್ನಷ್ಟು ಜೋರಾಗಿ ನಡೆಸುವ ಅಗತ್ಯ ಬಿದ್ದಿದೆ.

ಹಾಗಾಗಿ ಸ್ವಾಭಿಮಾನಿ ಸಮಾಜ ಬಾಂಧವರೇ, ನೀವೆಲ್ಲರೂ ಮೇಲ್ಕಾಣಿಸಿದ ಅಂತರ್ಜಾಲದ ಪುಟಕ್ಕೆ ಭೇಟಿ ನೀಡಿ, ಒಕ್ಕಣೆಯನ್ನು ಓದಿ, ನಂತರ ಈ ಅಂತರ್ಜಾಲದ ಪುಟವನ್ನು ಉಲ್ಲೇಖಿಸಿ, ಈ ಒಕ್ಕಣೆಗೆ ಜವಾಬ್ದಾರರಾದ ನಿರ್ದೇಶಕರು, ಕನ್ನಡ ಹಾಗೂ ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೇಸಿ ರಸ್ತೆ, ಬೆಂಗಳೂರು ಇವರಿಗೆ ಪತ್ರ ಮುಖೇನ ಅಥವಾ ಇ-ಮೇಲ್ ಮುಖೇನ ತಮ್ಮ ಪ್ರತಿಭಟನಾ ಪತ್ರವನ್ನು ಕಳುಹಿಸುವುದು ಈಗ ಅನಿವಾರ್ಯವಾಗಿದೆ. ನಿರ್ದೇಶಕರ ಇ-ಮೇಲ್ ವಿಳಾಸ ಹೀಗಿದೆ : kanbhavbir@gmail.com

ನಿರ್ದೇಶಕರಿಗೆ ಅಂತರ್ಜಾಲದಲ್ಲಾದ ಪ್ರಮಾದವನ್ನು ಸರಿಪಡಿಸಲು ಬೇಕಾದ ಎಲ್ಲಾ ಪೂರಕ ಮಾಹಿತಿಗಳನ್ನು (ಸ್ಥಾನಿಕರ ಬಗೆಗಿನ ಹಳೆಯ ದಾಖಲೆಗಳು ಹಾಗೂ ಪುಸ್ತಕಗಳು) ಈಗಾಗಲೇ ಒದಗಿಸಲಾಗಿದೆ. ಆದುದರಿಂದ ತಾವು ಕೇವಲ ತಮ್ಮ ಪ್ರತಿಭಟನೆಯನ್ನು ಸೂಚಿಸಿ ಪತ್ರ ಬರೆದರೆ ಸಾಕು. ಪತ್ರ ಬರೆಯುವಾಗ ತಮ್ಮ ಹೆಸರು ಹಾಗೂ ಹುದ್ದೆಯನ್ನು ಖಂಡಿತಾ ನಮೂದಿಸಿರಿ. ದಯವಿಟ್ಟು kanaja ವೆಬ್‌ಸೈಟ್‌ನಲ್ಲಿ ನಿಮ್ಮ ಪ್ರತಿಕ್ರಿಯೆ ದಾಖಲಿಸಬೇಡಿ. (ಮುಂದೆ ಮಾಹಿತಿ ತಿದ್ದಿ ಸರಿಪಡಿಸಿದರೂ ನಿಮ್ಮ ಪ್ರತಿಕ್ರಿಯೆ ಅಲ್ಲಿ ಓದುಗರಿಗೆ ಲಭ್ಯವಿರುವುದು ಬೇಡ ಎಂಬ ಉದ್ದೇಶಕ್ಕಾಗಿ).

ಈ ವೆಬ್‌ಸೈಟ್‌ನಲ್ಲಾದ ಪ್ರಮಾದವನ್ನು ಪತ್ತೆಹಚ್ಚಿ, ಅದರ ಅಧಿಕಾರಿಯನ್ನು ಗುರುತಿಸಿ ಅವರ ವಿಳಾಸ ಪತ್ತೆ ಹಚ್ಚಿ, ಅವರಿಗೆ ಸರಿಪಡಿಸಲು ವಿನಂತಿಸಿ, ಬೇಕಾದ ಇತಿಹಾಸದ ಮಾಹಿತಿಗಳನ್ನು ಒದಗಿಸಿ ನಮಗೆ ಕೇವಲ ಪತ್ರ ಕಳುಹಿಸಬೇಕಾದ ಕೆಲಸವನ್ನು ಸುಲಭಗೊಳಿಸಿರುವ ಬೆಂಗಳೂರಿನ ಇಂಜಿನಿಯರ್, ಮೂಲತಃ ಪರಾರಿಯವರಾದ ಶ್ರೀ ವಿಜಯಕುಮಾರ್‌ರವರ ಕಾರ್ಯ ಶ್ಲಾಘನೀಯವಾಗಿದೆ. ಸಮಾಜ ಬಾಂಧವರು ಅವರನ್ನು ಹಾಗೂ ಈ ಕೆಲಸದಲ್ಲಿ ಮುಂಚೂಣಿಯಲ್ಲಿರುವವರನ್ನು ಬೆಂಬಲಿಸಲು ಕರೆ ನೀಡುತ್ತಿದ್ದೇವೆ.

**ಸಂಪಾದಕ ಮಂಡಳಿ**


ಡಾ| ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಶ್ರೀ ಶಾರದಾ ಪತ್ರಿಕೆಯ ಓದುಗರಿಗೆ
ಮಹಾಶಿವರಾತ್ರಿಯ ಶುಭಾಶಯಗಳು

ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ-6

– ವೈ ಪ್ರಕಾಶ್‌ಕುಮಾರ್ ಕುಕ್ಕಿಕಟ್ಟೆ

## ಶ್ರೀ ಶ್ರೀನಿವಾಸ ದೇವಸ್ಥಾನ, ತಲೇಕಿ, ಕಡಬ, ಪುತ್ತೂರು ತಾಲೂಕು





ಪುತ್ತೂರು ತಾಲೂಕಿನ ಕುಟ್ರುಪಾಡಿ ಎಂಬ ಗ್ರಾಮದಲ್ಲಿ ಕಗ್ಗಾಡಿನ ಮಧ್ಯೆ, ನಿಸರ್ಗದ ಚೆಲುವಿನ ಒಂದು ಕಾಲದಲ್ಲಿ ಸ್ಥಾನಿಕ ಸಮಾಜದ ಚಟುವಟಿಕೆಯ ಕೇಂದ್ರವಾಗಿದ್ದ ದೇವಸ್ಥಾನವಿದು. ಕಡಬದ ಅಭಿವೃದ್ಧಿಯ ರೂವಾರಿ ಕುಂಭಾಟ್ ಕೃಷ್ಣಯ್ಯನವರ ನಮ್ಮ ಸಮಾಜಕ್ಕಾಗಿ ದೇವಸ್ಥಾನವನ್ನು ಕಟ್ಟಬೇಕೆಂಬ ಸತತ ಪ್ರಯತ್ನ ಹಾಗೂ ಅದಮ್ಯ ಉತ್ಸಾಹ ಹಾಗೂ ಸತತ ಪ್ರಯತ್ನದಿಂದ ಈ ದೇವಳವು 1899ರಲ್ಲಿ ಜೀರ್ಣೋದ್ಧಾರ ಹಾಗೂ ಬ್ರಹ್ಮಕಲಶೋತ್ಸವಗೊಂಡು ಪ್ರಸಿದ್ಧಿಗೆ ಬಂದಿತಾದರೂ ಮೂಲತಃ ಈ ದೇವಸ್ಥಾನವು ಜಗದ್ಗುರು ಶ್ರೀ ಶಂಕರಾಚಾರ್ಯರ ಕಾಲಕ್ಕೇ ಸೇರಿದುದಾಗಿದೆ. ಕಡಬಕ್ಕೆ ಭೇಟಿಯಿತ್ತಿದ್ದ ಶ್ರೀ ಶಂಕರಾಚಾರ್ಯರು ತಲೇಕಿ ಮಠವೆಂದೇ ಪ್ರಸಿದ್ಧಿಯಾಗಿದ್ದ ಈ ಮಠಕ್ಕೆ ಭೇಟಿಯಿತ್ತು ನರಸಿಂಹ ಹಾಗೂ ಗಣೇಶ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ್ದರೆಂಬುದು ಇತಿಹಾಸ. ಮುಂದೆ ಇದೇ ತಲೇಕಿ ಮಠದಲ್ಲಿ ಅಲ್ಲಿ ಶ್ರೀ ಶ್ರೀನಿವಾಸ ದೇವರನ್ನೂ ಪ್ರತಿಷ್ಠಾಪಿಸಿ ಪೂಜಿಸಿಕೊಂಡು ಬರುತ್ತಿದ್ದರು. ಕಾಲಕಳೆದಂತೆ ಜೀರ್ಣಾವಸ್ಥೆಗೆ ತಲುಪಿದ ಈ ಮಠವನ್ನು ಶ್ರೀ ಕುಂಭಾಟ್ ಕೃಷ್ಣಯ್ಯನವರು ತಮ್ಮ ಸುಪರ್ದಿಗೆ ತೆಗೆದುಕೊಂಡು ಅಲ್ಲಿ ಶ್ರೀ ಶ್ರೀನಿವಾಸ ದೇವರ ಮೂರ್ತಿಯೊಂದಿಗೆ ಶ್ರೀ ಕಾಶೀ ವಿಶ್ವನಾಥನ ಲಿಂಗವನ್ನೂ ಪ್ರತಿಷ್ಠಾಪಿಸಿ ಕುರಯ ನಾರಾಯಣ ಶಾಸ್ತ್ರಿಗಳ ಮೂಲಕ ಉತ್ಸವಾದಿಗಳನ್ನು ನಡೆಯಿಸಿಕೊಂಡು ಬರುತ್ತಿದ್ದರು. ಆ ಕಾಲದಲ್ಲಿ ಇದು ನಮ್ಮ ಸಮಾಜ ಬಾಂಧವರ ಚಟುವಟಿಕೆಯ ಮುಖ್ಯ ಕೇಂದ್ರವಾಗಿತ್ತು. ಕಾಲಕ್ರಮೇಣ ಭೂಮಸೂದೆಯಿಂದಾಗಿ ದೇವಸ್ಥಾನದ ಆಸ್ತಿಗಳು ಪರರ ಪಾಲಾಗಿ ಉತ್ಪತ್ತಿಯಿಲ್ಲದೇ ದೇವಳವು ಜೀರ್ಣಗೊಂಡಿತ್ತಾದರೂ 2012ನೇ ಇಸವಿಯಲ್ಲಿ ಸಮಗ್ರ ಜೀರ್ಣೋದ್ಧಾರಗೊಂಡು ಪುನಃ ಪ್ರತಿಷ್ಠೆ ಹಾಗೂ ಕುಂಭಾಭಿಷೇಕವು ನೆರವೇರಿದ್ದು ಈಗ ಪುನಃ ಧಾರ್ಮಿಕ ಚಟುವಟಿಕೆಗಳಿಂದ ಕಂಗೊಳಿಸುತ್ತಿದೆ.

ಶ್ರೀ ಶ್ರೀನಿವಾಸ ದೇವರ ಮೂರ್ತಿಯು ಸಾಲಿಗ್ರಾಮ ಶಿಲೆಯಲ್ಲಿ ಕೆತ್ತಲಾಗಿದ್ದು ಉತ್ಸವ ಮೂರ್ತಿಯು ಪಂಚಲೋಹದ್ದಾಗಿದೆ. ವಿಶ್ವನಾಥ ದೇವರ ಲಿಂಗವನ್ನು ಕಾಶಿಯಿಂದ ತಂದದ್ದು ಎನ್ನುತ್ತಾರೆ. ಎರಡೂ ದೇವರುಗಳಿಗೆ ಪ್ರತ್ಯೇಕ ಗರ್ಭಗುಡಿಗಳಿದ್ದು ಈರ್ವರು ಪ್ರಧಾನ ದೇವರುಗಳಾಗಿದ್ದಾರೆ. ಪ್ರತಿ ವರ್ಷ ಫೆಬ್ರುವರಿ ತಿಂಗಳಲ್ಲಿ ವರ್ಷಾವಧಿ ಉತ್ಸವ ನೆರವೇರುತ್ತದೆ. ಈ ವರ್ಷ ಉತ್ಸವ ತಾ.14-2-2016 ರಂದು ನೆರವೇರುತ್ತಿದೆ. ಉಪ್ಪಿನಂಗಡಿಯಿಂದ ಸುಬ್ರಹ್ಮಣ್ಯಕ್ಕೆ ಹೋಗುವ ದಾರಿಯಲ್ಲಿ ಕಡಬ ಊರು ಸಿಗುತ್ತದೆ. ಕಡಬ ಪೇಟೆಯಿಂದ ಅರ್ಧ ಕಿ.ಮೀ. ದೂರದಲ್ಲಿ ಎಡಕ್ಕೆ ತಲೇಕಿ ದೇವಸ್ಥಾನಕ್ಕೆ ಹೋಗುವ ರಸ್ತೆ (ಕೆಲ್ಲುಗುಡ್ಡೆ ರಸ್ತೆ)ಸಿಗುತ್ತದೆ. ಈ ರಸ್ತೆಯಲ್ಲಿ 2 ಕಿ.ಮೀ. ಪ್ರಯಾಣಿಸಿದರೆ ಈ ದೇವಸ್ಥಾನ ತಲುಪಬಹುದು.

ಪ್ರಸ್ತುತ ಆಡಳಿತ ಮೊಕ್ತೇಸರರಾಗಿ ಶ್ರೀ ಕೆ. ಭೆರತೇಶ್ವರ ಶರ್ಮ ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು 9322329723 ಸಂಖ್ಯೆಯಲ್ಲಿ ಸಂಪರ್ಕಿಸಿ. ಇನ್ನು ಹೆಚ್ಚಿನ ಮಾಹಿತಿಯನ್ನು ಕೆ. ಕೃಷ್ಣರಾಜ್ 9901364676 ಇವರಿಂದ ಪಡೆಯಬಹುದು.

**ಷಷ್ಟ್ಯಬ್ದಿ ಪ್ರಯುಕ್ತ ಅಭಿನಂದನೆಗಳು**



ಶ್ರೀಮತಿ ಆಶಾಲತಾ
ಮತ್ತು ಶ್ರೀ ಶ್ರೀನಿವಾಸ ರಾವ್ ಪೆರ್ಣಂಕಿಲ

ಕಾರ್ತಿಕ್ ರಾವ್
ಚೈತ್ರ ರಾವ್
ಶ್ರೀಮತಿ ಸುಮಿತ್ರಾ ರಾವ್
ಶ್ರೀಮತಿ ಮತ್ತು ಶ್ರೀ ನಿರಂಜನ ರಾವ್

With Best Compliments from :



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)

*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.
Inverters, UPS, Batteries, Repairs Maintenance & Charging

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ
ಕನಸಿನ ಮನೆ ಸಾಕಾರಗೊಳಿಸಿ
''ಗೃಹ ಸಾಲ''
(ಸಂಘದ ಪ್ರಾಥಮಿಕ ಸದಸ್ಯರಿಗೆ 11.50%)

| | | |
|---|---|---|
| ವಾಹನ ಸಾಲ | : | 13% |
| ಹಳೆಯ ವಾಹನ | : | 15% |
| ಆಭರಣ ಸಾಲ | : | 13% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 13% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 181 ದಿನಗಳು | : 6%, | 182 ದಿನಗಳಿಂದ 364 ದಿನಗಳು | : 7%, |
| 1 ವರ್ಷ ಮತ್ತು 2 ವರ್ಷಕ್ಕಿಂತ ಕಡಿಮೆ | : 9.5% | 2 ವರ್ಷ ಮತ್ತು ಹೆಚ್ಚಿನ ಅವಧಿಗೆ | : 10% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2008-09 ರಿಂದ 2014-15ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸೊಸೈಟಿಯ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಆ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ – ☎ 2522408   ಕುಕ್ಕಿಕಟ್ಟೆ ಶಾಖೆ – ☎ 2592133
ಪಡುಬಿದ್ರಿ ಶಾಖೆ – ☎ 2556608   ಕೋಟೇಶ್ವರ ಶಾಖೆ – ☎ 9341854114

# ಶ್ರೀಶಾರದಾ ಸನ್ನಿಧಿಯಿಂದ ಶ್ರೀಕ್ಷೇತ್ರ ಕಮಲಶಿಲೆಗೆ ನಮ್ಮ ಪ್ರವಾಸ

-ವೈ. ಮೋಹನ ರಾವ್

ಅಂದು ಜನವರಿ ತಿಂಗಳು 31ನೇ ತಾರೀಕು, ಬೆಳಗ್ಗೆ 7-15 ಗಂಟೆಗೆ ಸರಿಯಾಗಿ ಶ್ರೀಶಾರದಾ ಮಂಟಪದ ಅಂಗಣದಲ್ಲಿ ನಾವೆಲ್ಲ ಸೇರಿದ್ದೆವು. ಭಾರತಿ ಸಾರಿಗೆ ವಾಹನ ನಮ್ಮನ್ನೆಲ್ಲ ಶ್ರೀಕ್ಷೇತ್ರ ಕಮಲಶಿಲೆಗೆ ಕರೆದೊಯ್ಯಲು ಸಿದ್ಧವಾಗಿತ್ತು. ನಮ್ಮ ಮನಸ್ಸಿನಲ್ಲಿ ಶ್ರೀ ವಿಘ್ನೇಶ ಮತ್ತು ಶ್ರೀ ಶಾರದಾ ದೇವಿ ಇವರನ್ನು ನೆನೆದುಕೊಂಡೆವು. ಬಸ್ಸು ಹೊರಟಿತು. ಕೆಲವರು ಕಲ್ಸಂಕದ ಹತ್ತಿರ, ಇನ್ನು ಕೆಲವರು ಗುಂಡಿಬೈಲು, ಮತ್ತೆ ಕೆಲವರು ಬ್ರಹ್ಮಾವರ ಮತ್ತು ಬಾರ್ಕೂರಿನಲ್ಲಿ- ಹೀಗೆ ನಾವು ದೊಡ್ಡವರು 48 ಜನ ಮತ್ತು 5 ಜನ ಮಕ್ಕಳು ಇದ್ದೆವು. ನಮ್ಮನ್ನು ಹೊತ್ತುಕೊಂಡು ಬಸ್ಸು ಕಮಲಶಿಲೆಗೆ ಹೊರಡಲು ಹಸಿರು ನಿಶಾನೆ ಸಿಕ್ಕಿತು.


ಸುಮಾರು ಗಂಟೆ 8-30ಕ್ಕೆ 'ಗುಡ್ಡಟ್ಟು'ಗೆ ತಲಪಿದೆವು. ಶ್ರೀ ವಿನಾಯಕ ದೇವಸ್ಥಾನ, ಗುಡ್ಡಟ್ಟು ನಮ್ಮ ಮುಂದೆ ಗೋಚರಿಸಿತು. ಅಲ್ಲಿ ಕಲ್ಲಿನ ಗಣಪತಿಯ ಆಕಾರವನ್ನು ಒಳಗೆ ಕಂಡೆವು. ಉಡುಪಿ ಶ್ರೀಕೃಷ್ಣನನ್ನು 'ನವಗ್ರಹಕಿಂಡಿ'ಯ ಮೂಲಕ ನೋಡಿದಂತೆ ಅಲ್ಲಿ ಗಣಪತಿಯ ಆಕಾರವನ್ನು ಒಂದು ರಂಧ್ರದ ಮೂಲಕ ನೋಡಿದೆವು. ಈಗ ಇಲ್ಲಿ ರಂಧ್ರದ ಹತ್ತಿರ ಮತ್ತು ಎದುರು ದೇವರ ಮಂಟಪ ನಿರ್ಮಿಸಲ್ಪಟ್ಟಿದೆ. ಅಲ್ಲಿ ಶ್ರೀದೇವರ ಪ್ರಸಾದವನ್ನು ಸ್ವೀಕರಿಸಿದೆವು. ದಿನಾಂಕ 26-02-2016ನೇ ಶುಕ್ರವಾರ ದೇವಸ್ಥಾನದ ವಾರ್ಷಿಕೋತ್ಸವದ ಆಮಂತ್ರಣವನ್ನು ನಾವು ಪಡೆದೆವು. ಕೆಲವರು ಹಣ ಪಾವತಿಸಿ ಸೇವೆಯಲ್ಲಿ ಭಾಗವಹಿಸಿದರು.

ದೇವಸ್ಥಾನದ ಹಾಲ್‌ನಲ್ಲಿ ಬೆಳಗ್ಗೆ ಫಲಾಹಾರದ ವ್ಯವಸ್ಥೆ ಮಾಡಲ್ಪಟ್ಟಿತ್ತು. ಕಡುಬು, ಉಪ್ಪಿಟ್ಟು, ಅವಲಕ್ಕಿ, ಚಟ್ನಿ ಮತ್ತು ಮೆಣಸಿನ ಕಾಯಿ ಹಾಗೂ ಕಾಫಿ ಸೇವನೆ. ತೃಪ್ತಿಯಾಗುವಷ್ಟು ನಾವು ಸ್ವೀಕರಿಸಿದೆವು. ಅಲ್ಲಿಂದ ನಮ್ಮ ಮುಂದಿನ ಪಯಣ ವಾರಾಹಿ ವಿದ್ಯುಚ್ಛಕ್ತಿ ಯೋಜನೆಯ ಸ್ಥಳಕ್ಕೆ.

ಸುಮಾರು 10-30 ಗಂಟೆಗೆ ವಾರಾಹಿಯನ್ನು ತಲಪಿದೆವು. ಬಸ್ಸನ್ನು ಅಲ್ಲಿ ನಿಲ್ಲಿಸಿ ಮುಂದೆ ಸಾಗಿದೆವು. ಸರಕಾರಿ ಸ್ವಾಮ್ಯದ ವಾರಾಹಿ ಯೋಜನೆ ಅದಾಗಿತ್ತು. ಮೊದಲೇ ಪರ್ಮಿಷನ್ ಪಡೆದಿದ್ದೆವು. ಅಲ್ಲಿ ಸುಮಾರು 6 ಮೀಟರ್ ಉದ್ದದ ಒಂದೇ ಕಲ್ಲುಬಂಡೆಯಿಂದ ನಿರ್ಮಿಸಲ್ಪಟ್ಟ ಗುಹೆಯಾಕಾರಾದ ದಾರಿಯಿಂದ ನಾವು ಸಾಗಬೇಕು. ಎಲ್ಲರೂ ನಡೆದುಕೊಂಡು ಸುರಂಗ ಮಾರ್ಗದ ಮೂಲಕ ಹೋದೆವು. ಕೆಲವರನ್ನು (ನಡೆಯಲು ಸಾಧ್ಯವಾಗದವರು) ಮಾತ್ರ ಜೀಪೊಂದು ಅಲ್ಲಿ ಒಳಗೆ ಕೊಂಡೊಯ್ಯಿತು. ಅಲ್ಲಿಯ ಇಂಜಿನಿಯರ್ ಶಶಿಧರ್ ನಮಗೆ ಮಾರ್ಗದರ್ಶನ ಮಾಡಿದರು. ಅವರು ವಿವರಿಸುತ್ತಿದ್ದಂತೆ ನಾವೆಲ್ಲರೂ ಅವರ ಹಿಂದೆ ಸಾಗಿದೆವು. ಅದೊಂದು 'ಅದ್ಭುತ' ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರ. ವಿವಿಧ ರೀತಿಯ ಯಂತ್ರಗಳ ಶಬ್ದ ಇನ್ನಷ್ಟು ಅದ್ಭುತವಾಗಿ ಕಂಡಿತು. ಇಂಜಿನಿಯರ್ ನಮಗೆ ಸಾಕಷ್ಟು ವಿವರವನ್ನು ನೀಡಿದರು. ಕೆಲವರು ಆಸಕ್ತಿಯಿಂದ ಕೇಳಿದರು. ಇನ್ನು ಕೆಲವರು ಪ್ರಶ್ನೆಗಳನ್ನು ಕೇಳಿದರು. ಅವರು ಪ್ರತಿ ಯಂತ್ರದ ಸೂಕ್ಷ್ಮ ವಿಚಾರವನ್ನು ವಿವರಿಸಿದರು. ಆದರೆ ಅದನ್ನು ತಿಳಿದುಕೊಳ್ಳಲು ವಿಶೇಷ ಜ್ಞಾನ ಬೇಕಾಗುತ್ತದೆ. ಇಂಜಿನಿಯರ್‌ರವರ ಮಾರ್ಗದರ್ಶನವನ್ನು ಮೆಚ್ಚಿ ಎಲ್ಲರೂ ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು. ಅಲ್ಲಿ ಒಳಗೆ-ಹೊರಗೆ ಫೋಟೋ ತೆಗೆಯುವುದು ನಿಷೇಧಿಸಲ್ಪಟ್ಟಿತ್ತು. ವಿಶೇಷ ಆಸಕ್ತಿಯನ್ನು ತೋರಿಸುತ್ತಿದ್ದ ಶ್ರೀ ನಾರಾಯಣ ಭಂಡಿಯವರು ಪೆರ್ಡೂರು ದೇವಸ್ಥಾನದ ವಿಶೇಷ ಪ್ರಸಾದ ಬಾಳೆಹಣ್ಣನ್ನು ಎಲ್ಲರಿಗೂ ಹಂಚಿದರು. ಅಲ್ಲಿಂದ ನಮ್ಮ ಮುಂದಿನ ಪಯಣದ ಗುರಿ ಶ್ರೀಕ್ಷೇತ್ರ ಕಮಲಶಿಲೆ.

ಬಸ್ಸಿನಲ್ಲಿ ಕಿತ್ತಳೆಹಣ್ಣು ವಿತರಿಸಲಾಯಿತು. ಸ್ಪೆಶಲ್ ಚಿಪ್ಸ್‌ನ್ನು ಕೆಲವರು ತಿನ್ನುತ್ತಾ, ಕೆಲವರು ಹಾಡನ್ನು ಹಾಡುತ್ತಾ ಮುಂದಿನ ಗುರಿ ತಲಪಿದೆವು. ಆಗಾಗ ಬಸ್ಸಿನೊಳಗೆ ಬ್ಯಾಂಡಿನ ಮತ್ತು ವಾದ್ಯದ ಸುಮಧುರ ನಾದ ನಮಗೆ ಕೇಳಿಸುತ್ತಿತ್ತು.







ಸುಮಾರು ಗಂಟೆ 12-30ಕ್ಕೆ ನಾವು ನಮ್ಮ ಮುಖ್ಯ ಗುರಿಯಾದ ಶ್ರೀಕ್ಷೇತ್ರ ಕಮಲಶಿಲೆಗೆ ಕಾಲಿಟ್ಟೆವು. ಗಂಡಸರು ಶರ್ಟು ಮತ್ತು ಬನಿಯನನ್ನು ತೆಗೆದು ಮತ್ತೆ ಎಲ್ಲರೂ ಶ್ರೀ ಕಮಲಶಿಲೆ ದೇವಸ್ಥಾನದ ಒಳಗೆ ನಡೆದೆವು.

ಶ್ರೀಕ್ಷೇತ್ರ ಕಮಲಶಿಲೆಯ ವೈಶಿಷ್ಟ್ಯಗಳೇನು?

ಬಹಳ ಹಿಂದೆ ಪಾಂಡ್ಯ ದೇಶದಲ್ಲಿ 'ಸುತಪ್ತ' ಎಂಬ ಬ್ರಾಹ್ಮಣ ಶ್ರೇಷ್ಠನಿದ್ದನು. ಸುತಪ್ತನಿಗೆ ಹೈಮವಾಲಿ ಎಂಬ ಪತಿವ್ರತಾ ಶಿರೋಮಣಿಯಾದ ಪತ್ನಿ ಇದ್ದಳು. ಅವನು ಪತ್ನಿಯೊಂದಿಗೆ ಕಮಲಶಿಲೆಗೆ ಬರುತ್ತಾನೆ. ಸುಪಾರ್ಶ್ವ ಗುಹೆಯಲ್ಲಿ ಹತ್ತು ವರ್ಷಗಳ ಕಾಲ ದುರ್ಗಾಪರಮೇಶ್ವರಿಯನ್ನು ಭಕ್ತಿಯಿಂದ ಸುತಪ್ತ ಮುನಿ ಧ್ಯಾನಿಸುತ್ತಾನೆ. ಆಗ ಕ್ರೂರಾಕ್ಷಯೆಂಬ ರಕ್ಕಸನು ಅಲ್ಲಿಗೆ ಬಂದು ಸುತಪ್ತನನ್ನು ತಿನ್ನಲು ಯೋಚಿಸುತ್ತಾನೆ. ಆಗ ದೇವಿಯು 'ಬ್ರಾಹ್ಮೀ ಶಕ್ತಿ' ಸ್ವರೂಪಿಣಿಯಾದ ಬ್ರಹ್ಮಾಣಿಯನ್ನು ಕರೆದು ಸುಪಾರ್ಶ್ವ ಗುಹೆಯಲ್ಲಿ ತಪಸ್ಸು ಮಾಡುವ ಋಷಿಮುನಿಗಳಿಗೆ ರಕ್ಷಕಳಾಗುವಂತೆ ತಿಳಿಸುತ್ತಾಳೆ. ಬ್ರಹ್ಮಾಣಿಯು ಕ್ರೂರಾಕ್ಷನೊಂದಿಗೆ ಕೆಲವು ವರ್ಷಗಳ ಕಾಲ ಯುದ್ಧ ಮಾಡಿ ಅವನನ್ನು ವಧಿಸುತ್ತಾಳೆ. ದೇವಿಯ ಆಶಯದಂತೆ ಕಮಲಶಿಲೆ ಯಲ್ಲಿರುವ ಲಿಂಗದಲ್ಲಿ ಸುವರ್ಣ ರೇಖೆಯಿಂದ ಪ್ರಕಾಶಮಾನವಾಗಿ ಅವಳು ಐಕ್ಯಳಾದಳು. ಬ್ರಹ್ಮಾಣಿಶಕ್ತಿ ಐಕ್ಯವಾಗಿರುವುದರಿಂದ ಅಂದಿನಿಂದ ಶ್ರೀ ಬ್ರಾಹ್ಮಿ ದುರ್ಗಾಪರಮೇಶ್ವರಿ ಎಂಬ ನಾಮಧೇಯದಿಂದ ಪ್ರಸಿದ್ಧಳಾಗುತ್ತಾಳೆ. ಕೃತಯುಗದಿಂದ ಕಲಿಯುಗದ ವರೆಗೆ ಹಲವು ಋಷಿಗಳಿಗೆ ಮತ್ತು ರಾಜರುಗಳಿಗೆ ಮತ್ತು ನಂಬಿ ಬಂದ ಭಕ್ತರಿಗೆ ಒಲಿದು ಅವರ ಇಷ್ಟಾರ್ಥಗಳನ್ನು ನೆರವೇರುವಂತೆ ವರ ಪ್ರದಾನ ಮಾಡಿ ಶ್ರೀಕ್ಷೇತ್ರ ಕಮಲಶಿಲೆಯಲ್ಲಿ ಲಿಂಗ ರೂಪಿಯಾಗಿ ನೆಲೆನಿಂತು ಭಕ್ತರ ಮಾತೆಯಾಗಿ ಕಂಗೊಳಿಸುತ್ತಿದ್ದಾಳೆ. ಇಂತಹ ಮಹಾಮಹಿಮಳಾದ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿಗೆ ನಮಸ್ಕರಿಸಿ ಪ್ರಸಾದ ಸ್ವೀಕರಿಸಿ ಅಲ್ಲಿಯೇ ನಿಂತೆವು.

(6ನೇ ಪುಟಕ್ಕೆ...)

## ಮಹಿಳಾ ವೇದಿಕೆಯ ವತಿಯಿಂದ ನಡೆದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರ ವಿವರ

ಶ್ರೀಶಾರದಾ ಮಂಟಪದಲ್ಲಿ 24-01-2016ರಂದು ಮಹಿಳಾ ವೇದಿಕೆಯ ವತಿಯಿಂದ ನಡೆದ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರ ವಿವರ ಹೀಗಿದೆ.

**3 ವರ್ಷದ ಒಳಗಿನ ಮಕ್ಕಳಿಗೆ**

**ಬಲೂನು ಹೆಕ್ಕಿ ತರುವುದು :** ಪ್ರಥಮ : ಕೆ. ಶ್ರೀದೇವಿ, ಬೈಲಕೆರೆ, ಉಡುಪಿ. ದ್ವಿತೀಯ : ಆಯುಷ್

**3 ರಿಂದ 5 ವರ್ಷದ ವಯಸ್ಸಿನ ಮಕ್ಕಳಿಗೆ**

**1. ದಿಂಬು ಪಾಸ್ ಮಾಡುವುದು :** ಪ್ರಥಮ : ಅದಿತಿ ಹೆಬ್ಬಾರ್, ದ್ವಿತೀಯ : ಆರುಶಿ ಅಂಬಲ್ಪಾಡಿ

**2. ಚಿತ್ರದಲ್ಲಿರುವ ಹಣ್ಣುಗಳನ್ನು ಗುರುತಿಸುವುದು :** ಪ್ರಥಮ : ಆರುಶಿ ಅಂಬಲ್ಪಾಡಿ. ದ್ವಿತೀಯ : ಪ್ರಣತಿ, ಬೈಲೂರು,ಉಡುಪಿ.

**1ನೇ ತರಗತಿಯಿಂದ 3ನೇ ತರಗತಿಯವರೆಗೆ**

**1. ಬಕೆಟ್‌ಗೆ ಬಾಲ್ ಹಾಕುವುದು :** ಪ್ರಥಮ : ಪ್ರಜ್ವಲ್ ರಾವ್, ಮಣಿಪಾಲ. ದ್ವಿತೀಯ : ಅದಿತಿ, ಮೂಡುಬೆಟ್ಟು

**2. ಪುಸ್ತಕ ತಲೆಯಲ್ಲಿಟ್ಟು ನಡೆಯುವುದು :** ಪ್ರಥಮ : ಮಯೂರ್ ರಾವ್, ಕುಕ್ಕಿಕಟ್ಟೆ ದ್ವಿತೀಯ : ಸುಜೀಕ್ಷ, ಕೆಮ್ಮಣ್ಣು

**4ನೇ ತರಗತಿಯಿಂದ 6 ನೇ ತರಗತಿಯವರೆಗೆ**

**1. ಬಲೂನು ಊದಿ ಒಡೆಯುವುದು :** ಪ್ರಥಮ : ರೋಹನ್ ರಾವ್ ಸಾಲಿಗ್ರಾಮ, ದ್ವಿತೀಯ : ಪ್ರಣವ್, ಬೈಲೂರು ಉಡುಪಿ.

**2. ನಿಂಬೆಹಣ್ಣು ಚಮಚದಲ್ಲಿಟ್ಟು ನಡೆಯುವುದು :** ಪ್ರಥಮ : ಅದಿತಿ ರಾವ್, ಉಡುಪಿ. ದ್ವಿತೀಯ : ಕೀರ್ತಿವರ್ಧನ.

**7ನೇ ತರಗತಿಯಿಂದ 9 ನೇ ತರಗತಿಯವರೆಗೆ**

**1. ಸ್ಕಿಪ್ಪಿಂಗ್ :** ಪ್ರಥಮ : ಅನನ್ಯ ಬನ್ನಂಜೆ , ದ್ವಿತೀಯ : ಪಲ್ಲವಿ ರಾವ್, ಮಣಿಪಾಲ.

**2. ಸ್ಪಾತ್ರದಲ್ಲಿ ನೀರೆಳೆದು ಗ್ಲಾಸಿಗೆ ಭರ್ತಿ ಮಾಡುವುದು :** ಪ್ರಥಮ : ಪಲ್ಲವಿ ರಾವ್, ಮಣಿಪಾಲ. ದ್ವಿತೀಯ : ಶ್ರೇಯಾ ರಾವ್ ಸುರತ್ಕಲ್.

**60 ರಿಂದ 70 ವರ್ಷದ ಮಹಿಳೆಯರು**

**ಧಾನ್ಯಗಳನ್ನು ಬೇರ್ಪಡಿಸುವುದು :** ಪ್ರಥಮ : ಕುಸುಮ ಭಂಡಿ. ದ್ವಿತೀಯ : ಜ್ಯೋತಿ .ಎಸ್.ರಾವ್.

**70 ವರ್ಷ ಮೇಲ್ಪಟ್ಟ ಮಹಿಳೆಯರು**

**ಬಟ್ಟೆಯಲ್ಲಿ ಕಟ್ಟಿಟ್ಟ ಧಾನ್ಯಗಳನ್ನು ಮುಟ್ಟಿ ಗುರುತಿಸುವುದು :** ಪ್ರಥಮ : ವಿಮಲ ಶಾಸ್ತ್ರಿ ಬ್ರಹ್ಮಾವರ, ದ್ವಿತೀಯ : ಸುಶೀಲ ರಾವ್

**18 ರಿಂದ 60 ವರ್ಷದ ಒಳಗಿನ ಮಹಿಳೆಯರಿಗೆ**

**Bombing the city :** ಪ್ರಥಮ : ಆಶಾ ಕೆ. ಬೈಲಕೆರೆ, ದ್ವಿತೀಯ : ರೇಖಾ ಎಲ್. ರಾವ್ ಕುಕ್ಕಿಕಟ್ಟೆ,

**60 ವರ್ಷಮೇಲ್ಪಟ್ಟ ಮಹನೀಯರಿಗೆ**

**ಕೋಲಿಗೆ ರಿಂಗ್ ಎಸೆಯುವುದು :** ಪ್ರಥಮ : ಶ್ರೀ ಸುಬ್ರಹ್ಮಣ್ಯ ರಾವ್ ದೊಡ್ಡಣ್ಣಗುಡ್ಡೆ, ದ್ವಿತೀಯ : ಶ್ರೀ ವೆಂಕಟ್ರಾವ್, ಕರಂಬಳ್ಳಿ.

## ಶ್ರೀಶಾರದಾ ವೇದಿಕೆಯ ಮಹಾಪೋಷಕರು

ದಿ। ಅಂಬಲಪಾಡಿ ಕೃಷ್ಣರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ, ಡಾ। ಲೋಕೇಶ್‌ರಾವ್ ಬಿ.ಕೆ., ಶ್ರೀ ಕುಂಜಾರು ನಿರಂಜನ ರಾವ್, ಡಾ। ಸತ್ಯನಾರಾಯಣ ಶಿವಮೊಗ್ಗ, ಶ್ರೀ ಎಲ್ಲೂರು ಉಮೇಶ ರಾವ್, ಶ್ರೀ ಕೆ.ಅನಂತರಾಮ ಶಾಸ್ತ್ರಿ ಪಡುಬಿದ್ರಿ

# ಮಹಾಶಿವರಾತ್ರಿಯ ಪ್ರಯುಕ್ತ ವಿಶೇಷ ಲೇಖನ

- ಹರಿಕೃಷ್ಣ ರಾವ್ ಎ.
ಮೊ:9844207736



ಮಹಾಶಿವರಾತ್ರಿಯು ಬಹುಪ್ರಶಸ್ತವಾದ ದಿನ. ಮಾಘ ಮಾಸದ ಬಹುಳ ಚತುರ್ದಶಿಯ ದಿನ ಮಹಾಶಿವರಾತ್ರಿಯಾಗಿದೆ. ರಾತ್ರಿ ನಿದ್ದೆ ಮಾಡದೆ, ಒಂದು ಕಲೆ ಮಾತ್ರ ಉಳಿದಿರುವ ಚಂದ್ರನನ್ನು ಧರಿಸಿರುವ ಶಿವನನ್ನು ಆರಾಧಿಸುವ ಶುಭರಾತ್ರಿ.

ಶಿವ, ಸದಾಶಿವ, ಪರಶಿವ, ಈಶ್ವರ, ಶಂಭು, ಈಶ, ಮಹೇಶ್ವರ ಎಂಬ ಶಬ್ದಗಳು ಪರಮಾತ್ಮನ ಮನೋಜ್ಞನಾಮಗಳು. ರುದ್ರೈಕಾದಶಿನೀಯಲ್ಲಿ ಸಾರಭೂತವಾದದ್ದು 'ಪಂಚಾಕ್ಷರೀ' ರುದ್ರಾಧ್ಯಯದ ಶ್ರೀ ರುದ್ರನಮಕದಲ್ಲಿ 'ನಮಃ ಶಿವಾಯ ಚ ಶಿವತರಾಯಚ' ಎನ್ನುವ ಮಂತ್ರದಿಂದ ವಾಮದೇವ ಋಷಿಯು 'ನಮಃ ಶಿವಾಯ' ಎನ್ನುವ ಮಂತ್ರವನ್ನು ಜಗತ್ತಿಗೆ ಕರುಣಿಸಿದ. ಶಿವ ಶಬ್ದಕ್ಕೆ ಶುಭ, ಕಲ್ಯಾಣ, ಮಂಗಳ ಎಂದರ್ಥವಿದ್ದರೂ, ರಹಸಾರ್ಥ್ಯ ಹೀಗಿದೆ:- 'ನಮಃ' ಪದದಿಂದ ನಾನು ಜೀವನಲ್ಲ ಎಂಬ ಅರ್ಥ. ಚತುರ್ಥ್ಯಂತ ಪದ 'ನಾನು ನೀನೆ' ! ಎಂಬ 'ಅನ್ಯೋಸಾ, ಅನ್ಯೋಹಮಸ್ಮಿ ಸನವೇದ' ಇತ್ಯಾದಿ ಶ್ರುತ್ಯಾನುಸಾರ ಅಭೇದ ಭಾವವನ್ನು ಹೇಳುತ್ತದೆ. ಪ್ರಳಯದ ನಂತರ, ಪುನಃ ಸೃಷ್ಠಿ ರಚನೆಗೆ ಮುನ್ನ ಯಾರಲ್ಲಿ ವಿಶ್ವವು 'ನಿದ್ರೆ' ಮಾಡುತ್ತದೋ (ಶೇತೇ ಅಸ್ಮಿನ್ನಿತಿ ಶಿವ:) ಅತನೇ 'ಶಿವ' ಎಂಬುದು ವಾಚ್ಯರ್ಥ. 'ಪಂಚಾಕ್ಷರೀ'ಯಲ್ಲಿಯೂ 'ಶಿವ' ಇತ್ಯಕ್ಷರದ್ವಯವು ಬಹಳ ಶ್ರೇಷ್ಠತಮ. ಆ ಹೆಸರೇ ಜೀವವಿಲಕ್ಷಣ ಸ್ವರೂಪವನ್ನು ಬೋಧಿಸುತ್ತದೆ. ವಶ-ಕಾಂತೌ ಎನ್ನುವ ಧಾತುವಿನಿಂದ ವರ್ಣವ್ಯತ್ಯಯತಃ ಶಿವಶಬ್ದವು ಬಂದಿರುತ್ತದೆ. 'ಶೇರತೇ ಪ್ರಾಣಿನೋ ಯತ್ರ ಸಶಿವ'-ಅನಂತ ಪಾಪ-ತಾಪಗಳಿಂದ ಉದ್ವಿಗ್ನಗೊಂಡ ಪ್ರಾಣಿಯು ವಿಶ್ರಾಂತಿಗಾಗಿ ಎಲ್ಲಿ ಶಯನ ಮಾಡುವುದೋ ಅಂತಹ ಸರ್ವಾಧಿಷ್ಠಾನ ಹಾಗೂ ಸರ್ವಾಶ್ರಯವನ್ನು 'ಶಿವ' ಎಂದು ಹೇಳಲಾಗುತ್ತದೆ. ಪತಂಜಲಿಯು ಯೋಗ ಸೂತ್ರದಲ್ಲಿ ಈಶ್ವರನನ್ನು ವರ್ಣಿಸುತ್ತ 'ಸಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್' ಎಂದಿದ್ದಾನೆ.-'ಈಶ್ವರನು ಹಿಂದಿನ ಎಲ್ಲ ಸದ್ಗುರುಗಳಿಗೂ ಗುರುವಾಗಿದ್ದಾನೆ. ಏಕೆಂದರೆ, ಅವನಿಗೆ ಆದಿಯೇ ಇಲ್ಲ. ಅನಾದಿಕಾಲದಿಂದ ಈಶ್ವರನು ಇದ್ದಾನೆ. ವೇದವು ಶ್ರೀ ಶಿವನನ್ನು 'ಈಶಾನಃ ಸರ್ವವಿದ್ಯಾನಾಮೀಶ್ವರಃ ಸರ್ವ ಭೂತಾನಾಂ ಬ್ರಹ್ಮಾಧಿಪತಿಃ ಬ್ರಹ್ಮಣೋಧಿಪತಿಃ' ಎಂದು ಸ್ತುತಿಸಿದೆ. ಶಿವನು ಸಮಸ್ತ ವಿದ್ಯೆಗಳಿಗೂ ಒಡೆಯ. ಸಮಸ್ತ ಪ್ರಾಣಿಗಳಿಗೂ ಅಧಿಪತಿ. ವೇದಗಳ ಪ್ರಭು. ಬ್ರಾಹ್ಮಣರ ಅಭಿದೇವತೆ ಎಂದು ವರ್ಣಿಸಿದೆ. 'ಶಾಂತಂ ಶಿವಮದ್ವೈತಂ' ಎಂದು ಉಪನಿಷತ್ತುಗಳು ವರ್ಣಿಸಿವೆ. ಶ್ರೀ ಶಂಕರ ಭಗವತ್ಪಾದರು 'ಶಿವಾನಂದ ಲಹರಿ'ಯಲ್ಲಿ ಶಿವನ ಮಹಿಮೆಯನ್ನು ಕೊಂಡಾಡಿದ್ದಾರೆ. ರಾಜಯೋಗ, ಮಂತ್ರಯೋಗ, ಲಯಯೋಗಗಳು ಶಿವನಿಂದ ಆವೀರ್ಭೂತವಾದವು. ಶ್ರೀ ಶಂಕರರ 'ಯೋಗ ತಾರಾವಳಿ'ಯಲ್ಲಿ ಜಗತ್ತಿನಲ್ಲಿರುವ ಮನೋಲಯ ವಿಧಾನಗಳು ಶಿವ ಪ್ರೋಕ್ತವಾದವುಗಳೆಂದು ವಿವರಿಸಲಾಗಿದೆ. ಮನಸ್ಸನ್ನು ಆತ್ಮದಲ್ಲಿ ಸೇರಿಸುವುದೆ 'ಲಯ'ದ ಅರ್ಥ. ಜೀವಾತ್ಮ ತಾನು ಪರಮಾತ್ಮನೆಂದು ಸಂಭ್ರಮಿಸುವುದೇ, ಲಯಕಾರನಾದ ಶಿವನು ನೀಡುವ ಪರಮಾನಂದ.

**ಶಿವನ ಸುಂದರ ಭೂಷಣಗಳ ತತ್ತ್ವಗಳು:**

**ಲಿಂಗ :** ಲಿಂಗ ಎಂದರೆ 'ಚಿಹ್ನೆ'. ಪರಮೇಶ್ವರನನ್ನು ಸಗುಣ-ನಿರ್ಗುಣನಾಗಿ ಪ್ರತಿನಿಧಿಸಿ ಆರಾಧಿಸಲು ಇದೊಂದು ಉಪಾಧಿ. 'ಲಿಂಗ' ಎಂದರೆ 'ಲೀನಂ ಅರ್ಥಂಗಮಯರೇತಿ ಲಿಂಗವ್' ಎಂಬ ವ್ಯುತ್ಪತ್ತಿಯಂತೆ ತನ್ನೊಳಗೇ ಅಡಕವಾಗಿರುವ ಪರಮೇಶ್ವರನನ್ನು ನೆನಪಿಸಿಕೊಳ್ಳುವುದು. ಲಿಂಗವು ಬ್ರಹ್ಮದಿಂದ ರೂಪವಾಗಿದೆ. ವಿಶ್ವವು ಸರಳ ರೇಖೆಯಲ್ಲಿಲ್ಲ. ಅದು ವೃತ್ತವಾಗಿದೆ. ಜರ್ಮನಿಯ ಅಲ್‌ವರ್ಚ್ ಎಂಬ ಗಣಿತಜ್ಞನು ಈ ತತ್ವವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾನೆ. ಭೌತಿಕ ವಸ್ತುಗಳ ಮೂಲರೂಪ ವಕ್ರವಾಗಿದೆ. ಇಲೆಕ್ಟ್ರಾನ್‌ಗಳು, ನ್ಯೂಟ್ರಾನ್, ಪ್ರೋಟಾನ್‌ಗಳ ಕೇಂದ್ರಕ್ಕೆ ಸುತ್ತುತ್ತಿರುವ ವ್ಯೂಹವು ವಕ್ರವಾಗಿದೆ. ಸ್ಥೂಲ (Macro) ಸೂಕ್ಷ್ಮ(Micro) ವಿಶ್ವವು ಒಂದೇ ರೀತಿ ಇದೆ. ಸೂರ್ಯನಿಗೆ ಸುತ್ತುತ್ತಿರುವ ಗ್ರಹಗಳಂತೆ, ಎಲ್ಲ ಚರಾಚರಗಳು ಅಂತಿಮವಾಗಿ ಲೀನವಾಗುವುದು ಬ್ರಹ್ಮಾಂಡದಲ್ಲೇ. ಭೌತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅನಂತ ಬ್ರಹ್ಮಾಂಡವು ಲಿಂಗದ ಆಕಾರದಲ್ಲಿ ಇರುವುದನ್ನು ಸಾಧಿಸಿದ್ದಾರೆ. ಹಾಗಾಗಿ ಲಿಂಗ ಕಲ್ಪನೆಯು ಭಗವಂತನ ಆರಾಧನೆಯ ಮೂರ್ತಿಕಲ್ಪನೆಯಿಂದಲೂ ಸನಾತನವಾಗಿದೆ. ಇರುವುದನ್ನು ಇರುವಂತೆ ಕಲ್ಪಿಸುವ ಆರಾಧನೆ ಉತ್ತಮ.

**ಜ್ಯೋತಿರ್ಲಿಂಗಗಳು :** ಪುಣ್ಯ ಭೂಮಿ ಭಾರತ ಜ್ಯೋತಿರ್ಮಯ. ಮಹಾದೇವ ಶಿವನ ಪೂರ್ಣಕೃಪಾವಲಯ ಇಲ್ಲಿ ಸಿಗುತ್ತದೆ. ಎಲ್ಲೆಲ್ಲೂ ಶಿವಲಿಂಗಗಳಿವೆ. ದೇಶದಾದ್ಯಂತ ಹರಡಿರುವ ದ್ವಾದಶ (12) ಜ್ಯೋತಿರ್ಲಿಂಗಗಳು ಪ್ರಸಿದ್ಧ. ಅವುಗಳು 1. ಸೌರಾಷ್ಟ್ರದ ಸೋಮನಾಥೇಶ್ವರ 2. ಶ್ರೀ ಶೈಲದ ಶ್ರೀ ಮಲ್ಲಿಕಾರ್ಜುನ 3. ಉಜ್ಜಯನಿಯ ಶ್ರೀ ಮಹಾಕಾಲೇಶ್ವರ 4. ಮಧ್ಯ ಪ್ರದೇಶದ ಶ್ರೀ ಓಂಕಾರೇಶ್ವರ (ಅಮಲೇಶ್ವರ) 5. ಉತ್ತರಪ್ರದೇಶದ ಶ್ರೀ ಕೇದಾರನಾಥ 6. ಮಹಾರಾಷ್ಟ್ರದ ಶ್ರೀ ಭೀಮೇಶ್ವರ 7. ಕಾಶಿಯ ಶ್ರೀ ವಿಶ್ವನಾಥ 8. ಮಹಾರಾಷ್ಟ್ರದ ಶ್ರೀ ತ್ರ್ಯಂಬಕೇಶ್ವರ 9. ಮಹಾರಾಷ್ಟ್ರದ ಶ್ರೀ ವೈದ್ಯನಾಥ 10. ಮಹಾರಾಷ್ಟ್ರದ ಶ್ರೀ ನಾಗಾನಾಥ 11. ತಮಿಳುನಾಡಿನ ಶ್ರೀ ರಾಮೇಶ್ವರ 12. ಮಹಾರಾಷ್ಟ್ರದ ಶ್ರೀ ಘೃಶ್ಮೇಶ್ವರ. ಇವುಗಳ ದರ್ಶನ ಮೋಕ್ಷಪ್ರದ

**ಚಂದ್ರಶೇಖರ :** 'ಚಂದ್ರಮಾಮನಸೋಜಾತಃ' ಪುರುಷಸೂಕ್ತದಲ್ಲಿರುವಂತೆ ಮನಸ್ಸಿನ ಪ್ರತಿಕೃತಿ ಚಂದ್ರನ ಸ್ವರೂಪ. ಇದು ಸಂಪೂರ್ಣವಾದ ಮನೋನಿಗ್ರಹದ ಸಂಕೇತ. ಶಾಂತಿ, ಆನಂದಗಳನ್ನು ಇದು ಸೂಚಿಸುತ್ತದೆ.

**ಗಂಗಾಧರ :** ಗಂಗೆಯ ಅವಿಚ್ಛಿನ್ನ ಜ್ಞಾನ ಪ್ರವಾಹವನ್ನು ಸೂಚಿಸುತ್ತದೆ. ಅದು ಪಾಪಗಳನ್ನು ನಾಶಪಡಿಸುತ್ತದೆ. ಶಿವಲಿಂಗದ ಅಭಿಷೇಕ, ಪ್ರಸಾದಗಳು ಪರಮಪವಿತ್ರ. ಭೂಮಿಗೆ ಬಂದ ಗಂಗೆಯು ಪಾವನ, ಪ್ರಸಾದವಾಗಲು ಶಿವನ ತಲೆಯಿಂದ ಇಳಿದಿರುವುದೇ ಕಾರಣ. ಶಿವನ ಜಟೆಯಿಂದ ಹರಿಯುವ ಗಂಗೆ ಶಾಂತಿ, ಪಾವಿತ್ರ್ಯ, ಮೋಕ್ಷ ಮೊದಲಾದ ಸದ್ಗುಣಗಳ ಪರಿಚಾಯಕಗಳಾಗಿವೆ.

**ಮುಕ್ಕಣ್ಣ :** ಮೂರನೆಯ ಕಣ್ಣು ಜ್ಞಾನದ ಕಣ್ಣು. ಎರಡು ಹುಬ್ಬುಗಳ ನಡುವೆ ಇರುವ 'ಆಜ್ಞಾ' ಚಕ್ರದ ಕಡೆ ಇರುವ ಗುರು ಕೃಪೆಯನ್ನು ಸಾಧಿಸಿದರೆ ಅಂತರ್‌ದೃಷ್ಟಿಯು ಯೋಗಿಗಳಿಗೆ ಉಂಟಾಗುವುದು. ಇದು ಸತ್ಯದ ವೀಕ್ಷಣೆಗೆ ಇರುವ ಕಣ್ಣು. ಈ ಕಣ್ಣು ತೆರೆದಾಗ ಕಾಮ(ಆಸೆ) ದಹನವಾಗುವುದು. ಮಿಥ್ಯಾ ಜಗತ್ತು ಭಸ್ಮವಾಗಿ ಯೋಗಿಯು ಆತ್ಮಾನಂದವನ್ನು ಪಡೆಯುವನು.

**ಪಂಚವದನ :** ಐದು ಮುಖಗಳಿಂದ ಶಿವನಿಗೆ ಪಂಚಮುಖ, ಪಂಚಾಸ್ಯ, ಪಂಚವದನ ಎಂಬ ಹೆಸರುಗಳು ಬಂದಿವೆ. ಪ್ರಥ್ವಿ, ಆಪ್, ತೇಜಸ್ಸು, ವಾಯು, ಆಕಾಶದಿಂದ ಕೂಡಿದ ಪಂಚತತ್ತ್ವಾತ್ಮಕ ಜಗತ್ತು ಶಿವಮಯವೆಂದು ಇದು ತಿಳಿಸುತ್ತದೆ. ತತ್ಪುರುಷ, ಅಘೋರ, ಸದ್ಯೋಜಾತ, ವಾಮದೇವ, ಈಶಾನ ಇವುಗಳೇ ಐದು ಮುಖಗಳ ಹೆಸರುಗಳು.

ಶಿವನು ಧರಿಸಿರುವ ಗಜ ಚರ್ಮಾಂಬರವು ಅಹಂಕಾರನಿಗ್ರಹವನ್ನು, ವ್ಯಾಘ್ರ ಚರ್ಮವು ಕಾಮನಿಗ್ರಹವನ್ನು, ಸರ್ಪಧಾರಣವು ಕ್ರೋಧನಿಗ್ರಹ ಮತ್ತು ರೋಗ ನಿರೋಧಕತ್ತ್ವವನ್ನು ಸೂಚಿಸುತ್ತದೆ. ಶಿವನ ತ್ರಿಶೂಲವು ಗುಣತ್ರಯಗಳಿಂದ ರಚಿತವಾಗಿದೆ. ಇವುಗಳ ನಿಗ್ರಹ ಮತ್ತು ಸಂಮಿಶ್ರಣದಿಂದ ಶತ್ರು ಸಂಹಾರ ಸಾಧ್ಯವೆಂದು ಸಾರುತ್ತದೆ.

ನಾದನುಸಂಧಾನದ ಪ್ರತೀಕವೇ ಶಿವನ ಕೈಯಲ್ಲಿರುವ ಡಮರು. ಈ ವಾದ್ಯ ತ್ರಿಕೋಣ ಪ್ರಕೃತಿಯ ಪ್ರತೀಕ. ಇದು ತ್ರಿಗುಣಾತ್ಮಕ ಪ್ರಕೃತಿಯಿಂದ ಬಿಡುಗಡೆಯ ಆಶ್ವಾಸನೆಯನ್ನು ಕೊಡುವುದು. ಈ 'ಡಮರು'ವಿನ ನಾದವೇ ಪಾಣಿನಿ ಮಹರ್ಷಿಗಳಿಗೆ ಶಬ್ದಶಾಸ್ತ್ರರಚನೆಗೆ ಮೂಲವಾಯಿತು.

ಶಿವನು ನೀಲಕಂಠ, ವಿಶ್ವಕ್ಕೆ ಭಾದೆಯನ್ನುಂಟು ಮಾಡುವ ಅಜ್ಞಾನ(ಕೆಡುಕು)ವನ್ನು ಹೀರಿದವನು. ಕಂಠದಲ್ಲಿ ಧರಿಸಿರುವ ವಿಷವು ಶಿವನ ಮೃತ್ಯುಂಜಯ ರೂಪವನ್ನು ಸ್ಪಷ್ಟಪಡಿಸುವುದಲ್ಲದೇ, ಲೋಕಕ್ಕೆ ಕೆಡುಕಾಗುವ ವಿಷಯ (ಯೋಚನೆ, ಮಾತು, ಕೃತಿ)ಗಳನ್ನು ಮಾನವ ಹೊರಬಿಡಬಾರದೆಂದು ಸೂಚಿಸುತ್ತದೆ.

ಶಿವ ವಿಭೂತಿ ಧೂಳಿತ. ಬಾಹ್ಯ ಜಗತ್ತಿನ ದೇಹವು ಕೊನೆಯದಾಗಿ 'ಲಯ'ದಲ್ಲಿ ಮುಕ್ತಾಯಗೊಳ್ಳುವುದರಿಂದ, ಭಸ್ಮವು ದೇಹಾಭಿಮಾನವನ್ನು ಬಿಟ್ಟು ಮೋಕ್ಷದ ಗುರಿಯನ್ನು ಸದಾ ನೆನಪಿಸುತ್ತದೆ.

ಶಿವನು ಧನುರ್ಧರ. ಉಪನಿಷತ್ತಿನಂತೆ ಓಂಕಾರವೇ ಶಿವನ ಧನಸ್ಸು. ಅದರಿಂದ ಸತ್ಯದ ಕಡೆ ಕ್ರಮಿಸಬೇಕು. ಶಿವನ ವಾಹನ 'ವೃಷಭ'! ವೃಷಭ ಎಂಬ ಪದಕ್ಕೆ 'ಮಹಾ ಪ್ರಾಣ ವರ್ಷಣ' ಎಂದರ್ಥ. ಜಗತ್ತಿನ ಮಹಾ ಪ್ರಾಣರೂಪವಾಗಿ ಹರಡಿದ ಶಕ್ತಿಯೇ ಶಿವ. ಅಂತೆಯೇ ಉತ್ಪತ್ತಿ ಕಾರಣನಾದ ಮಹಾಪ್ರಾಣವು ಶಿವ. 'ವೃಷಭ' ಎಂದರೆ ವೇದದಲ್ಲಿ 'ಶಬ್ದ' ಅಥವಾ 'ಮಾತು'. ಮನಸ್ಸಿನ ನಿಯಂತ್ರಣವೇ ಪರಮೇಶ್ವರನ ವಾಹನವೆಂಬುದು ತಾತ್ಪರ್ಯ. ನಂದಿ ಎಂದರೆ ಆನಂದ. 'ಆ-ನಂದ' 'ವೃಷಭ' ಅಂದರೆ ನಿರಂತರ, ಅಂತರ ಇಲ್ಲದ ಆನಂದ. ಆನಂದವೇ ಶಿವನ ವಾಹನ. ಆನಂದದಲ್ಲಿರುವವನೇ ಸದಾಶಿವ.

ಶಿವನ ದೇಹವೇ ಭೌತಿಕವಾದ ಪ್ರಥ್ವಿ, ಗಂಗೆಯೇ ಜಲತತ್ತ್ವ, ತ್ರಿನೇತ್ರನ ಹಣೆಕಣ್ಣೇ ಅಗ್ನಿತತ್ತ್ವ, ಹಾವೇ ವಾಯುತತ್ತ್ವ, ಕಂಠವೇ ಆಕಾಶ. ಜ್ಞಾನ (ಬುದ್ಧಿ) ಇಚ್ಛೇ (ಮನಸ್ಸು) ಕ್ರೀಯೆ (ಶರೀರ) ಸಮೂಹವೇ ತ್ರಿಶೂಲಗಳು. ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳಿರುವಂತೆ 'ಈಶ್ವರಃ ಸರ್ವಭೂತಾನಾಂ ಹೃದ್ದೇಶೇರ್ಜುನ ತಿಷ್ಠತಿ ॥'. ಈಶ್ವರನು ಎಲ್ಲರ ಹೃದಯದಲ್ಲಿ ನೆಲೆಸಿರುವ ಸರ್ವೋತ್ತಮನಾದ ಭಗವಂತ. 'ಅದ್ವೈತವೇ' ಮಂಗಲಮಯನಾದ 'ಪರಮೇಶ್ವರ'. ಶಿವರಾತ್ರಿಯು ಎಲ್ಲರಿಗೂ ಶುಭ ಮಂಗಳವನ್ನು ತರಲಿ.

---

# ಸೈನಿಕ

-ಶ್ರೀಮತಿ ಅಮೃತಾ ಹೇಮಂತ್

ಸೈನಿಕ, ಯೋಧ, ಸೇನಾನಿ, soldier, ಸಿಪಾಯಿ,.. ಯಾರಿತ..?

ಈತ ಯಾರು.?

ತನ್ನ ಸರ್ವಸ್ವವನ್ನು ತೊರೆದು ತನ್ನನ್ನು ತಾನು ದೇಶಕ್ಕಾಗಿ ನೀಡುವವ ಯಾರೀತ.?

ತನ್ನ ತನುಮನವನ್ನು ತಾಯಿ ಭಾರತಿಗಾಗಿ ಮುಡಿಪಾಗಿಟ್ಟ ಈತ ಯಾರು?

ಎಂಬ ಪ್ರಶ್ನೆಗಳು ಮನದೊಳಗೆ ಏಳತೊಡಗುತ್ತಿದೆ. ಸೈನಿಕ ಎಂಬ ಪದ ಕಿವಿಯ ಮೇಲೆ ಬಿದ್ದ ಕೂಡಲೆ.

ಸೈನಿಕರು ಯಾರು? ಯಾತಕ್ಕಾಗಿ ತಮ್ಮನ್ನು ತಾವು ಈ ದೇಶಕ್ಕಾಗಿ ಅರ್ಪಿಸಬೇಕು? ಇವರುಗಳಿಗೆ ಭಾವನೆಗಳೇ ಇಲ್ಲವೆ? ಎಂಬ ಪ್ರಶ್ನೆಗಳು ತಲೆಯನ್ನು ಕೆಡಿಸಿ ಬಿಡುತ್ತಿದೆ.

ತಲೆಯನ್ನು ತಿನ್ನುತ್ತಿರುವ ಪ್ರಶ್ನೆಗಳ ಗೊಂದಲದ ನಡುವೆಯೇ ಕಳೆದು ಹೋಗುತ್ತಿರುವಾಗ ತಟ್ಟನೆ ಉತ್ತರ ಎದುರು ಬಂದು ನಿಲ್ಲುತ್ತದೆ. ಆ ಉತ್ತರ ಪ್ರೇಮ ದೇಶಪ್ರೇಮ ದೇಶದ ಬಗೆಗಿನ ಅಗಾಧವಾದ ಪ್ರೀತಿ ಗೌರವ.

ಸಾಮಾನ್ಯ ಜನರಾದ ನಮಗೂ ದೇಶದ ಮೇಲೆ ಪ್ರೀತಿ ಇದೆ. ಆದರೆ ಏಕೆ ನಾವು ಎಲ್ಲವನ್ನು ದೇಶಕ್ಕಾಗಿ ಅರ್ಪಿಸುವುದಿಲ್ಲ, ಏಕೆಂದರೆ ನಮ್ಮ ಪ್ರೀತಿ ಬರಿಯ ಹೃದಯದ ಒಂದು ಕೋಣೆಯಲ್ಲಿ ಇದ್ದರೆ ಅವರ ಪ್ರೀತಿ ಅವರ ಹೃದಯದ ಪ್ರತಿಕೋಣೆ, ಅವರ ರಕುತದ ಕಣಕಣದಲ್ಲಿ ಆವರಿಸಿದೆ. ಹಾಗಾಗಿ ಅವರು ತಮ್ಮ ಪ್ರಾಣವನ್ನು ದೇಶಕ್ಕಾಗಿ ನೀಡಲು ತಯಾರಿದ್ದಾರೆ.

ನಿಜವಾಗಿಯೂ ಸೈನಿಕರೇ ನೀವು ಎಲ್ಲರಿಗಿಂತಲೂ ಶ್ರೇಷ್ಟ. ನಮ್ಮ ದೇಶದೊಳಗೆ ಎಷ್ಟೋ ಸಾಧಕರಿರಬಹುದು. ಸಂಗೀತ, ನೃತ್ಯ ವಿಜ್ಞಾನ, ತಂತ್ರಜ್ಞಾನ, ಕ್ರೀಡೆ, ಎಲ್ಲಾ ರಂಗಗಳಲ್ಲಿ ಬಹಳಷ್ಟು ಸಾಧಕರಿರಬಹುದು. ಆದರೆ ಅವರಾರು ನಿಮ್ಮ ಶ್ರೇಷ್ಟತೆಗೆ ಸರಿಸಾಟಿ ಅಲ್ಲ.

ಮೈಕೊರೆವ ಚಳಿ ಇರಲಿ ತಲೆಸುಡುವ ಬಿಸಿಲಿರಲಿ ಪ್ರವಾಹವಿರಲಿ, ಏನೇ ಬರಲಿ ಹೋಗಲಿ ನೀವು ನಮ್ಮ ದೇಶವನ್ನು ಕಾಯುತ್ತಲೇ ಇರುವಿರಿ. ಹಿಮಾಲಯದ ಪರ್ವತಶ್ರೇಣಿಗಳಲ್ಲಿ ನೀವು ಒಬ್ಬಂಟಿಯಾಗಿರಿ, ಇಲ್ಲ ಮರುಭೂಮಿಯ ಸುಡುವ ಮರಳಿನ ಮೇಲೆ ಇರಿ, ನಿಮ್ಮ ಮನದೊಳಗೆ ಕೇವಲ ಒಂದೇ ಒಂದು ಉದ್ದೇಶವಿರುತ್ತದೆ. ಅದು ನಮ್ಮ ಭಾರತ ಮಾತೆಯ ರಕ್ಷಣೆ.

ನೀವು ಬರಿಯ ಗಡಿಯನ್ನು ಮಾತ್ರ ಕಾಯುವುದಿಲ್ಲ, ನೀವು ದೇಶದೊಳಗೆ ಏನೇ ಗಲಾಟೆಯಾಗಲಿ, ಬರಗಾಲ ಎದುರಾದರೆ, ಪ್ರವಾಹ ಉಂಟಾದರೆ ಸಹಾಯಕ್ಕಾಗಿ ಬರುತ್ತೀರಿ. ನಿಮಗೆ ಏನು ದೊರೆಯದಿದ್ದರೂ ನಗುನಗುತ್ತಾ ತಮ್ಮ ಕೆಲಸ ಮಾಡುತ್ತೀರಿ.

ನಿಮ್ಮ ಕೆಲಸವು ಪ್ರಪಂಚದ ಎಲ್ಲಾ ಕೆಲಸಗಳಿಗಿಂತ ಶ್ರೇಷ್ಟವಾದದ್ದು. ನೀವು ಎಲ್ಲಾ ನೋವುಗಳನ್ನು ತಮ್ಮ ಎದೆಯೊಳಗೆ ಬಚ್ಚಿಟ್ಟು ಶತ್ರುಗಳಿಗೆ ಎದೆಯೊಡ್ಡಿ ನಿಲ್ಲುತ್ತೀರಿ. you are really great.

ಪ್ರಪಂಚ ಸಂಪರ್ಕ ಸಾಧನದಲ್ಲಿ ಮುಂದುವರಿದರೂ ನಿಮಗೆ ಅಂಚೆ ಅಣ್ಣನೇ ಗೆಳೆಯ. ಮನೆಗೆ ಪತ್ರವಿರಲಿ, ಮನೆಯಿಂದ ಪತ್ರವಿರಲಿ ಅಂಚೆಯಣ್ಣನೇ ಮಧ್ಯವರ್ತಿ. ಮನೆಯ, ಅಮ್ಮನ, ಅಪ್ಪನ, ಗೆಳೆಯರ, ಹೆಂಡತಿ, ಮಕ್ಕಳ ನೆನಪು ಬರಲಿ ಅದನ್ನು ಮರೆಯಲ್ಲಿ ಇಡಬೇಕು. ನಮ್ಮ ಹಾಗೆ ಆರಾಮದಾಯಕವಾದ ಜೀವನವು ಅಲ್ಲ, ಎಲ್ಲ ಶಿಸ್ತುಬದ್ಧವಾಗಿರಬೇಕು.

ನಿಮಗೆ ಜಾತಿ, ಮತ, ಪಂಥ, ರಾಜ್ಯ, ಭಾಷೆ ಯಾವುದರ ಭೇದವಿಲ್ಲ, ನಿಮ್ಮಲ್ಲಿ ಒಡಕಿಲ್ಲ. ನೀವು ಎಲ್ಲರೂ ನಿಜವಾಗಿಯೂ ಜಾತ್ಯಾತೀತರು. ಎಲ್ಲಾ ಮೇಲುಕೀಳುಗಳನ್ನು ಮೀರಿ ನಿಂತ ಮಹಾನ್ ವ್ಯಕ್ತಿಗಳು.

ನೀವು ನಮ್ಮನ್ನು ಕಾಯುವ ಸೈನಿಕರು.
We really love u people
Thank you for saving our country
Jai hind soldier

*With Best Complimemts From*

**SRI M. SHAILESH RAO** Ph : 9448624324
B.E., Civil

**Civil Engineer & Contractor**
**SRI MALAVIKA ASSOCIATES**
KALSANKA-UDUPI ROAD, UDUPI.
**Website : shreemaalavikaassociates.com**

# ಅಮೇರಿಕದಾದ್ಯಂತ ಕೃಷ್ಣ ಪ್ರಜ್ಞೆಯನ್ನು ಪಸರಿಸುತ್ತಿರುವ ಹರೇ ಕೃಷ್ಣ ದೇವಸ್ಥಾನಗಳು

ವರದಿ : **ಡಾ। ಎಚ್.ವಿ. ನರಸಿಂಹಮೂರ್ತಿ, ಕುಂದಾಪುರ.**

ಶ್ರೀಕೃಷ್ಣನು ಬೋಧಿಸಿದ ಭಕ್ತಿಯೋಗವೇ ಆಧಾರವಾಗಿ ಉಳ್ಳ ISKCON (ಇಸ್ಕಾನ್: ಇಂಟರ್‌ನ್ಯಾಷನಲ್ ಸೊಸೈಟಿ ಫಾರ್ ಕೃಷ್ಣ ಕಾನ್ಸಿಯಸ್‌ನೆಸ್) ಅಮೇರಿಕದಾದ್ಯಂತ ನೂರಾರು ಹರೇಕೃಷ್ಣ ದೇವಸ್ಥಾನಗಳನ್ನು ಹೊಂದಿದೆ. ಭಾರತಸಂಜಾತರಾದ ಭಕ್ತಿವೇದಾಂತ ಸ್ವಾಮಿ ಪ್ರಭುಪಾದ ಎಂಬುವರು ಇದರ ಸಂಸ್ಥಾಪಕರು. 1966 ರಲ್ಲಿ ಅಮೆರಿಕೆಗೆ ತೆರಳಿ 'ಹರೇಕೃಷ್ಣ ಆಂದೋಲನ'ವನ್ನು ಆರಂಭಿಸಿದರು. ಭಾರತದ ಆಧ್ಯಾತ್ಮ ಸಂದೇಶವನ್ನು-ಅದರಲ್ಲೂ ಮುಖ್ಯವಾಗಿ ಭಗವದ್ಗೀತೆಯ ತತ್ತ್ವಗಳನ್ನು ಪಾಶ್ಚಾತ್ಯ ಜಗತ್ತಿಗೆ ತಲುಪಿಸಲು ಅವರು ಸಮರ್ಥರಾದರು. ಅವರು ಸ್ಥಾಪಿಸಿದ ದೇವಸ್ಥಾನ, ಆಶ್ರಮ, ಶಾಲೆ, ಕಾಲೇಜು, ಗೋಶಾಲೆ-ಇವೆಲ್ಲವೂ ಇಂದು ತುಂಬ ಪ್ರಸಿದಿ□ಪಡೆದಿರುವುದನ್ನು ಕಾಣಬಹುದು.

ನನ್ನ ಮಗನ ಮನೆ ಇರುವ ಜಾಕ್ಸನ್‌ವಿಟ್‌ಗೆ ಸಮೀಪದಲ್ಲಿರುವ 'ಅಲಚುಆ' ಎಂಬ ನಗರದ ಹತ್ತಿರದ ಸುಮಾರು ನೂರಿಪ್ಪತ್ತಾರು ಎಕ್ರೆ ಕಾಡುಪ್ರದೇಶದಲ್ಲಿರುವ 'ಹರೇಕೃಷ್ಣ ದೇವಸ್ಥಾನ'ದ ಪರಿಸರ ಪ್ರಾಚೀನ ಋಷಿ-ಮುನಿಗಳ ತಪೋವನನ್ನು ನೆನಪಿಗೆ ತರುತ್ತದೆ. ನಾನು ಭೇಟಿ ನೀಡಿದ ಭಾನುವಾರ ಸಂಜೆ ದೇವಸ್ಥಾನದ ಹೊರಭಾಗದಲ್ಲಿ ನೂರಾರು ಕಾರುಗಳು ಸಾಲಾಗಿ ನಿಂತಿದ್ದುವು. ಇವೆಲ್ಲ ಅಲ್ಲಿಗೆ ಬಂದ ಕೃಷ್ಣ ಭಕ್ತರ ವಾಹನಗಳು. ಆಶ್ರಮವಾಸಿಗಳ ಸಂಖ್ಯೆ ನೂರಮೂವತ್ತು. ಶನಿವಾರ-ಭಾನುವಾರ ಮತ್ತು ರಜಾದಿನಗಳಲ್ಲಿ ಸಹಸ್ರಾರು ಮಂದಿ ಕೃಷ್ಣಭಕ್ತರು ಇಲ್ಲಿಗೆ ಬರುತ್ತಾರೆ. ಶಿಖೆ, ಉಪವೀತ, ಗೋಪಿಚಂದನ, ಕಚ್ಚೆಪಂಚೆ, ತುಲಸಿಮಣಿಧಾರಿಗಳಾದ ಅವರೆಲ್ಲ ಸೇರಿ ತಬಲಬಾರಿಸುತ್ತಾ, 'ಭಕ್ತಿಭವನ'ದಲ್ಲಿ ಮಾಡುತ್ತಿದ್ದ 'ಹರೇರಾಮ-ಹರೇಕೃಷ್ಣ' ಭಜನೆ ಆಶ್ರಮದ ಪ್ರದೇಶದಲ್ಲೆಲ್ಲ ಅನುರಣಿಸುತ್ತಿತ್ತು. ಅಮೆರಿಕದ ತರುಣಿಯೊಬ್ಬಳು ರಾಧೆಯಂತೆ ವೇಷಧರಿಸಿ ಶ್ರೀಕೃಷ್ಣ-ರಾಧೆಯರ ಅಮೃತಶಿಲೆಯ ಸುಂದರ ವಿಗ್ರಹದ ಎದುರು ನರ್ತಿಸುತ್ತಿದ್ದಳು.

'ಭಕ್ತಿಭವನ'ದ ಹೊರಗೆ ಹಸಿರಿನಿಂದ ನಳ-ನಳಿಸುವ ಗಿಡ-ಮರಗಳ ಬುಡದಲ್ಲಿ ಬಂದವರಿಗೆಲ್ಲ ಪ್ರಸಾದರೂಪದಲ್ಲಿ ಚಿತ್ರಾನ್ನ - ಪಾನಕ ಮೊದಲಾದ ತಿಂಡಿ-ತೀರ್ಥಗಳನ್ನು ಶಿಸ್ತುಬದ□ಾಗಿ ವಿತರಿಸುತ್ತಿದ್ದರು. ಅಲ್ಲಿನ ಮೇಲ್ವಿಚಾರಕರೊಬ್ಬರು ನನ್ನ ಪರಿಚಯ ಮಾಡಿಕೊಂಡು ಭಾರತದಿಂದ ಬಂದವನೆಂದು ತಿಳಿದು ಕುಳಿತುಕೊಳ್ಳಲು ಹೇಳಿ, ಆಶ್ರಮದ ಒಳಗೆಹೋದರು. ಸ್ವಲ್ಪ ಹೊತ್ತಿನಲ್ಲಿಯೇ 'ಮುಖಿಯಾ ದೇವೀ ದಾಸೀ' ಎಂಬ ಮಹಿಳೆಯೊಬ್ಬರು ನಾನಿದ್ದಲ್ಲಿಗೆ ಬಂದು ಕೈಮುಗಿದು ನಮಸ್ಕರಿಸಿದರು. ಇವರು ಆಶ್ರಮದ ಮುಖ್ಯ ನಿರ್ವಾಹಕರು. ಸುಮಾರು ಹದಿನಾರು ವರ್ಷಕಾಲ ಭಾರತದ ಮಥುರಾ-ದ್ವಾರಕಾ ಮೊದಲಾದ ಕೃಷ್ಣ ಕ್ಷೇತ್ರದಲ್ಲಿ ಇದ್ದವರು. ಅವರ ವೇಷ-ಭೂಷಣ ಲಲಾಟಲಾಂಛನ-ಎಲ್ಲವೂ ಭಾರತೀಯ ಮಹಿಳೆಯರಂತೆಯೇ ಇದ್ದವು. ತುಂಬ ಹೊತ್ತು ನಮ್ಮ ಜತೆಯಲ್ಲಿದ್ದು, ಆಶ್ರಮದ ಸಮಗ್ರ ಪರಿಚಯ ನೀಡಿದರು.

**ಪಾಠಶಾಲೆಗಳು:** 'ಭಕ್ತಿವೇದಾಂತ ಅಕಾಡೆಮಿ' ಹೆಸರಿನ ಸಹ ಸಂಸ್ಥೆಯು ಈ ಆಶ್ರಮ ಪ್ರದೇಶದಲ್ಲಿ ಎರಡು ಪಾಠ ಶಾಲೆಗಳನ್ನು ನಡೆಸುತ್ತಿದ್ದು ಮಕ್ಕಳಿಗೆ ಯೋಗ, ಸಂಸ್ಕೃತ, ಭಗವದ್ಗೀತೆ ಮತ್ತು ಸ್ವಾಮಿ ಪ್ರಭುಪಾದರು ಬೋಧಿಸಿದ ಕೃಷ್ಣ ಭಕ್ತಿಯನ್ನು ಕಲಿಸುತ್ತದೆ. ಪಾಠಶಾಲೆಯ ಮಕ್ಕಳೆಲ್ಲ ಭಾರತದ ಪ್ರಾಚೀನ ಗುರುಕುಲಗಳ ವಿದ್ಯಾರ್ಥಿಗಳಂತೆ ಶಿಸ್ತುಬದ□ೀವನ ನಡೆಸುತ್ತಿದ್ದಾರೆ. ಬಾಲಕರು ಮಾತ್ರವಲ್ಲ, ಬಾಲಿಕೆಯರಿಗೂ ಇಲ್ಲಿ ಅವಕಾಶವಿದೆ. ಸಂಜೆ ಹೊತ್ತು ಅವರೆಲ್ಲ ಸೇರಿ ಆಟವಾಡುತ್ತಿದ್ದ ದೃಶ್ಯ ನಯನ ಮನೋಹರವಾಗಿತ್ತು.

**ಗೋಸಂರಕ್ಷಣಾ ಕೇಂದ್ರ:** ಸುಮಾರು ಇಪ್ಪತ್ತಾರು ವರ್ಷಗಳಿಂದ ಈ ಆಶ್ರಮವು ಗೋಸಂರಕ್ಷಣಾ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಗೋಶಾಲೆಯಲ್ಲಿ ನೂರಾರು ದನ-ಕರುಗಳಿವೆ, ದನಗಳ ಪೋಷಣೆ ಮತ್ತು ರಕ್ಷಣೆಗೆ ವಿಶೇಷ ಗಮನ ಕೊಡಲಾಗುತ್ತಿದೆ. ಶ್ರೀಕೃಷ್ಣ ದೇವರ ಅಭಿಷೇಕ, ಪಂಚಾಮೃತ, ಪಂಚಗವ್ಯ ಮತ್ತು ಸಾಮೂಹಿಕ ಅನ್ನಸಂತರ್ಪಣೆಗೆ ಬೇಕಾಗುವ ಹಾಲು-ಮೊಸರುಗಳಿಗೆ ಇಲ್ಲಿನ ಗೋ ಉತ್ಪನ್ನಗಳನ್ನು ಉಪಯೋಗಿಸಲಾಗುತ್ತದೆ. ಆಶ್ರಮ ಪ್ರದೇಶದಲ್ಲಿರುವ ಹೊಲ-ಗದ್ದೆಗಳು, ತರಕಾರಿಗಳ ತೋಟ ಮತ್ತು ಹೂದೋಟಗಳ ಕೃಷಿಗೆ ಎತ್ತುಗಳನ್ನು ಬಳಸಲಾಗುತ್ತದೆ. ಪ್ರತಿನಿತ್ಯ ಗೋಪೂಜೆ ನಡೆಯುತ್ತದೆ. ಯಾರಾದರೂ ಭಕ್ತರು ತಾವು ಚೆನ್ನಾಗಿ ಸಾಕುತ್ತೇವೆಂದು ಮುಂದೆ ಬಂದರೆ ಅವರಿಗೆ ಗೋದಾನ ನೀಡುತ್ತಾರೆ. 'ಗವಾಂ ಮಧ್ಯೇ ವಸಾಮ್ಯಹಮ್' ಎಂಬ ಶ್ರೀಕೃಷ್ಣನ ಮಾತಿಗೆ ಇಲ್ಲಿ ವಿಶೇಷ ಮಹತ್ತ್ವ ನೀಡಲಾಗುತ್ತಿದೆ.

**ಅನ್ನದಾನ:** ಕಳೆದ ಮೂವತ್ತೇಳು ವರ್ಷಗಳಿಂದ ನಿರಂತರವಾಗಿ ಈ ದೇವಸ್ಥಾನದ ಆಶ್ರಯದಲ್ಲಿ ಸಾರ್ವಜನಿಕ ಅನ್ನದಾನ ನಡೆಯುತ್ತಿದೆ. ಆಶ್ರಮವಾಸಿಗಳು ಮಾತ್ರವಲ್ಲದೆ, ಸಂದರ್ಶಕರೂ ಸಹ ಅನ್ನಪ್ರಸಾದ ಸ್ವೀಕರಿಸುತ್ತಾರೆ. ಸೋಮವಾರದಿಂದ ಶುಕ್ರವಾರದವರೆಗೆ ಸಮೀಪದಲ್ಲಿರುವ ಕಾಲೇಜೊಂದರ ವಿದ್ಯಾರ್ಥಿಗಳಿಗೆಲ್ಲ ಶುದ□ ಸಾತ್ತ್ವಿಕ ಶಾಖಾಹಾರವನ್ನು ಉಚಿತವಾಗಿ ನೀಡುತ್ತಿದ್ದಾರೆ. ಅಲ್ಲದೆ ದೇವಾಲಯದ ಸಮೀಪದ ಅನೇಕ ಮಂದಿ ನಿರ್ಗತಿಕರು ಮತ್ತುಅಶಕ್ತರಿಗೂ ಪ್ರಸಾದ ಭೋಜನವನ್ನು ಒದಗಿಸಲಾಗುತ್ತಿದೆ. ವಿಶೇಷವೆಂದರೆ ಊಟಕ್ಕೆ ಬಡಿಸುವ ಮೊದಲು ಅನ್ನವನ್ನು ದೇವರಿಗೆ ನೈವೇದ್ಯ ಮಾಡಿ, ನಂತರ ಪ್ರಸಾದ ರೂಪದಲ್ಲಿ ಸ್ವೀಕರಿಸುವ ಈ ಸಾತ್ತ್ವಿಕ ಆಹಾರ ನಾವು ಮಾಡಿದ ಪಾಪಗಳನ್ನು ಪರಿಹರಿಸುತ್ತದೆ ಮತ್ತು ನಮ್ಮ ವ್ಯಕ್ತಿತ್ವವನ್ನು ಪರಿಶುದ□ೊಳಿಸುತ್ತದೆ-ಎಂಬ ದೃಢವಾದ ನಂಬಿಕೆ ಅವರದು.

ದೇವಸ್ಥಾನದಲ್ಲೇ ಅಡುಗೆ ಮನೆ ಮತ್ತು ವಿಶಾಲವಾದ ಭೋಜನ ಶಾಲೆ ಇದೆ. ಅಡುಗೆಯ ಕಾರ್ಯದಲ್ಲಿ ಅನೇಕ ಮಂದಿ ಆಶ್ರಮವಾಸಿಗಳು ಸ್ವಯಂಸೇವಕರಾಗಿ ಸಹಕರಿಸುತ್ತಾರೆ. ಅವರೆಲ್ಲರೂ ಸ್ನಾನಮಾಡಿ, ಶುಚಿರ್ಭೂತರಾಗಿ ಅಡುಗೆ ಮಾಡುವ ಮತ್ತು ಬಡಿಸುವ ದೃಶ್ಯವನ್ನು ಪ್ರತಿನಿತ್ಯ ನೋಡಬಹುದು.

**ಧ್ಯಾನ ಕುಟೀರಗಳು :** ದೇವಸ್ಥಾನದ ಪರಿಸರದ ಹಸಿರುಕಾಡಿನ ಮಧ್ಯೆ ಅಲ್ಲಲ್ಲಿ ಧ್ಯಾನಕುಟೀರಗಳನ್ನು ಕಾಣಬಹುದು. ಗಿಡ-ಮರಗಳನ್ನು ಕಡಿದು ಪರಿಸರಕ್ಕೆ ಹಾನಿಯನ್ನುಂಟು ಮಾಡದೆ ನಿರ್ಮಿಸಲಾದ ಈ ಕುಟೀರಗಳಲ್ಲಿ ಭಕ್ತರು ಧ್ಯಾನ-ಯೋಗ-ಭಜನೆ ಇತ್ಯಾದಿಗಳಲ್ಲಿ ನಿರತರಾಗಿರುತ್ತಾರೆ. ಬೆಳಗ್ಗೆ ಬೇಗನೆ ಎದ್ದು ನಿತ್ಯಕರ್ಮಗಳನ್ನು ಪೂರೈಸಿ, ದೇವಾಲಯದ ಪೂಜೆ-ಪಾರಾಯಣ-ಪ್ರವಚನಗಳಲ್ಲಿ ಭಾಗವಹಿಸುತ್ತಾರೆ. ಕೆಲವರು-ಗೋಶಾಲೆಗೆ ಹೋಗಿ ಹಾಲು ಕರೆಯುವುದು, ಹೂದೋಟಗಳಲ್ಲಿ ಗಿಡಗಳಿಗೆ ನೀರು ಹಾಕುವುದು, ಹೂಕೊಯ್ಯುವುದು-ಮೊದಲಾದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

ಮನೆ-ಮನೆಗಳಿಗೆ ತೆರಳಿ ಭಗವದ್ಗೀತೆಯ ಪುಸ್ತಕವನ್ನು ಉಚಿತವಾಗಿ ಕೊಟ್ಟುಬರುತ್ತಾರೆ. ಇಸ್ಕಾನ್ ಪ್ರಕಟಣೆಗಳಾದ 'ಬ್ಯಾಕ್‌ಟುಗಾಡ್‌ಹೆಡ್' ಎಂಬ ಮಾಸಪತ್ರಿಕೆ, ಭಾಗವತ, ವಿಷ್ಣುಪುರಾಣ ಮತ್ತಿತರ ಧಾರ್ಮಿಕ ಗ್ರಂಥಗಳನ್ನು ಆಸಕ್ತರಿಗೆ ತಲುಪಿಸುತ್ತಾರೆ. ಆಗಾಗ ಫ್ಲೋರಿಡಾದ ಬೀಚುಗಳಿಗೆ, ಸಮೀಪದ ಬೆಟ್ಟ-ಗುಡ್ಡಗಳಿಗೆ, ತಾಂಪಾ ಮೊದಲಾದ ಕಡೆ ಇರುವ ಹಿಂದೂ ದೇವಸ್ಥಾನಗಳಿಗೆ ಪ್ರವಾಸ ಮಾಡುತ್ತಿರುತ್ತಾರೆ.

**ಅರ್ಚಕರು ಮತ್ತು ಪುರೋಹಿತರು :** ದೇವಸ್ಥಾನದಲ್ಲಿ ಪ್ರತಿನಿತ್ಯ ಬೆಳಗ್ಗೆ 4.30ಕ್ಕೆ ಮಂಗಳಾರತಿ, 5ಕ್ಕೆ ತುಲಸೀಪೂಜೆ, 7.30ಕ್ಕೆ ಗುರುಪೂಜೆ, 7.30ರಿಂದ 11.30ರ ವರೆಗೆ ಸಾರ್ವಜನಿಕ ದರ್ಶನ, 12.30ಕ್ಕೆ ರಾಜಭೋಗ ಆರತಿ, 4.30ಕ್ಕೆ ಧೂಪಾರತಿ, 6.30ಕ್ಕೆ ಸಂಧ್ಯಾ ಆರತಿ ಮತ್ತು 8.30ಕ್ಕೆ ಸಾಯಾನ್ನ ಆರತಿ ನಡೆಯುತ್ತದೆ. ಈ ಕಾರ್ಯವನ್ನು ನಡೆಸಲು ಸಂಸ್ಕೃತ ಅಭ್ಯಾಸ ಮಾಡಿದ ದೈವಭಕ್ತರಾದ ಅರ್ಚಕರಿದ್ದಾರೆ. ಪ್ರತಿನಿತ್ಯ ಬೆಳಗ್ಗೆ 8ಕ್ಕೆ ಧಾರ್ಮಿಕ ಪ್ರವಚನ ನಡೆಯುತ್ತದೆ. ಭಾನುವಾರ ಸಂಜೆ 5.15 ರಿಂದ ವಿಶೇಷ ಪ್ರವಚನವಿರುತ್ತದೆ.

**ಸಾರ್ವಜನಿಕ ಸಹಭಾಗಿತ್ವ :** 'ಇಸ್ಕಾನ್' ನಡೆಸುತ್ತಿರುವ ಈ ಎಲ್ಲ ಕಾರ್ಯಗಳಲ್ಲಿ ಆಸಕ್ತ ಸಾರ್ವಜನಿಕರು ದೇಣಿಗೆಗಳನ್ನು ನೀಡಿ ಭಾಗವಹಿಸಬಹುದು. ದಿನಕ್ಕೆ ಒಂದು ಡಾಲರ್, ಆದಾಯದಲ್ಲಿ ಸ್ವಲ್ಪಾಂಶ, ವಾರ್ಷಿಕ 'ಸ'ದಸ್ಯತ್ವ- ಹೀಗೆ ಅನೇಕ ಯೋಜನೆಗಳು ಇಲ್ಲಿವೆ. ಸ್ವಯಂ ಸೇವಕರಾಗಿ ಗೋಸೇವೆ, ಅನ್ನದಾನ, ಪಾಠಶಾಲೆಗಳಲ್ಲಿ ಪಾಲ್ಗೊಳ್ಳಬಹುದು. ದೇವಾಲಯದಲ್ಲಿ ನಡೆಯುವ ಕೃಷ್ಣಜನ್ಮಾಷ್ಟಮಿ, ಗೀತಾಜಯಂತಿ, ಶಿವರಾತ್ರಿ, ಗೋವರ್ಧನ ಪೂಜೆ, ರಾಮನವಮಿ, ದೀಪಾವಳಿ, ಯುಗಾದಿ-ಮೊದಲಾದ ವಿಶೇಷ ಹಬ್ಬ-ಹರಿದಿನಗಳಲ್ಲಿ ಭಾಗವಹಿಸಬಹುದು. ಧ್ಯಾನಕುಟೀರಗಳಲ್ಲಿ ವಾಸ ಮಾಡಬಹುದು. ಹೀಗೆ ಆಸಕ್ತರ ಧರ್ಮಶ್ರದ□ಾಪೋಷಕವಾದ ಅನೇಕ ಅವಕಾಶಗಳು ಇಲ್ಲಿವೆ.

ಹೀಗೆ ಸನಾತನ ಹಿಂದೂಧರ್ಮ ಮತ್ತು ವೈದಿಕ ಸಂಸ್ಕೃತಿಯ ಸಂರಕ್ಷಣೆಯಲ್ಲಿ ಅಮೇರಿಕದ 'ಇಸ್ಕಾನ್' ನಡೆಸುತ್ತಿರುವ ಹರೇಕೃಷ್ಣ ದೇವಸ್ಥಾನಗಳ ಕಾರ್ಯ ನಿಜಕ್ಕೂ ಶ್ಲಾಘನೀಯ.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)

**ಶ್ರೀ ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.**

### ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಆಚರಣೆ



**ತಾ.07-03-2016, ಸೋಮವಾರ ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಮಹಾಶಿವರಾತ್ರಿಯನ್ನು ಆಚರಿಸಲಾಗುವುದು. ಅಂದು ಬೆಳಿಗ್ಗೆ 8 ಗಂಟೆಯಿಂದ ರುದ್ರಾಭಿಷೇಕ, ಲಲಿತಾ ಸಹಸ್ರನಾಮ ಪಾರಾಯಣ, ಮಹಿಳಾ ವೇದಿಕೆಯವರಿಂದ ಭಜನೆ ಇತ್ಯಾದಿ ಸೇವೆಗಳು ನೆರವೇರಲಿವೆ. ನಂತರ ಮಧ್ಯಾಹ್ನ 12-00 ಗಂಟೆಗೆ ಮಹಾಪೂಜೆ ಹಾಗೂ ಲಘುಪಹಾರದೊಂದಿಗೆ ಪ್ರಸಾದ ವಿತರಣೆ.**

**ಸಮಾಜ ಬಾಂಧವರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.**

**ಕೆ. ಸುರೇಶ್ ರಾವ್**
ಕಾರ್ಯದರ್ಶಿ

**ವೈ. ಭುವನೇಂದ್ರ ರಾವ್**
ಅಧ್ಯಕ್ಷರು

## ಶಿಕ್ಷಣ ಮತ್ತು ತರಬೇತಿ ವೇದಿಕೆ

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು**
**ಶ್ರೀಶಾರದಾ ಮಂಟಪ, ಉಡುಪಿ-2**

**ಎಸ್.ಎಸ್.ಎಲ್.ಸಿ. (ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ)**
**ವಿದ್ಯಾರ್ಥಿಗಳಿಗೆ ಪರೀಕ್ಷಾ ತರಬೇತಿ ಶಿಬಿರ**
**CCE ಮಾದರಿಯಲ್ಲಿ (80:20) ಪರೀಕ್ಷಾ ತರಬೇತಿ ಕಾರ್ಯಕ್ರಮ**

**ತಾ.28-02-2016 (ರವಿವಾರ) ಸ್ಥಳ : ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ.**
**ಸಮಯ : ಬೆಳಿಗ್ಗೆ 9-30ರಿಂದ ಸಂಜೆ 4-30ರ ವರೆಗೆ**

ಶಿಬಿರದಲ್ಲಿ ಹಿಂದಿನ ಪಬ್ಲಿಕ್ ಪರೀಕ್ಷೆ ಮತ್ತು ಇತ್ತೀಚಿನ ಪೂರ್ವಸಿದ್ಧತಾ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಚರ್ಚೆ, ಗಣಿತ ಮತ್ತು ವಿಜ್ಞಾನ ವಿಷಯಗಳ ಬಗ್ಗೆ ವಿವರವಾಗಿ ಅನುಭವಿ ಶಿಕ್ಷಕರಿಂದ ಮಾಹಿತಿಗಳನ್ನು ನೀಡಲಾಗುವುದು.

ವಿ.ಸೂ. :
1) ವಿದ್ಯಾರ್ಥಿಗಳು ಪಠ್ಯಪುಸ್ತಕಗಳು ಮತ್ತು ಬರವಣಿಗೆ ಸಾಮಗ್ರಿಗಳೊಂದಿಗೆ ಹಾಜರಿರಬೇಕು.
2) ಶಿಬಿರಕ್ಕೆ ಯಾವುದೇ ಶುಲ್ಕ ಇರುವುದಿಲ್ಲ.
3) ಶಿಬಿರದಲ್ಲಿ ಊಟ, ಉಪಾಹಾರಗಳ ವ್ಯವಸ್ಥೆ ಇರುತ್ತದೆ.
4) ಆಸಕ್ತ ವಿದ್ಯಾರ್ಥಿಗಳು ವೇದಿಕೆಯ ಸಂಯೋಜಕರಾದ ಶ್ರೀ ಪ್ರಭಾಕರ ಭಂಡಿ (ಫೋನ್ : 9449254846) ಅಥವಾ ಸಂಚಾಲಕರಾದ ಎಸ್.ಎಮ್.ರಾವ್ (ಫೋನ್ : 9449914040) ಇವರಲ್ಲಿ ನೋಂದಾಯಿಸಬೇಕಾಗಿ ವಿನಂತಿ.

**ನಮ್ಮ ಸಮಾಜದ ವಿದ್ಯಾರ್ಥಿಗಳು ಈ ಶಿಬಿರದ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಕೋರಲಾಗಿದೆ.**

ಡಾ। ರವೀಂದ್ರನಾಥರಾವ್ ವೈ. (ಅಧ್ಯಕ್ಷರು)        ಎಸ್.ಎಮ್.ರಾವ್ (ಸಂಚಾಲಕರು)




ತಂತ್ರಾಡಿ ವಿಶ್ವನಾಥ ಶಾನುಭೋಗ್
☎ 94487 24161
97417 85551
ಹರಿಕೃಷ್ಣ ಡಿಜಿಟಲ್ಸ್
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

# ಪಡುಬಿದ್ರಿ ಸಂಘದ ಪ್ರವಾಸ

ವರದಿ : ಸೀತಾದೇವಿ ಭಾಸ್ಕರ್ ರಾವ್

ಸ್ಥಾನಿಕ ಬ್ರಾಹ್ಮಣ ಸಭಾ ರಿ., ಪಡುಬಿದ್ರಿಯ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಸಮಾಜ ಬಾಂಧವರು ಸೇರಿ ತಾ.17-1-2016ನೇ ರವಿವಾರ ಒಂದು ದಿನದ ಪ್ರವಾಸವನ್ನು ನಡೆಸಿದೆವು. ಇದಕ್ಕಾಗಿ ನಾವು ನಿಗದಿಪಡಿಸಿದ ಸ್ಥಳ ಬೆಳ್ತಂಗಡಿಯ ಕೂಡಬೆಟ್ಟು ವಿನಲ್ಲಿರುವ ಶ್ರೀ ಸದಾಶಿವ ದೇವಸ್ಥಾನ ಹಾಗೂ ಪಶ್ಚಿಮ ಘಟ್ಟದಿಂದ ಧುಮುಕಿ ಹರಿದು ಬರುತ್ತಿರುವ 'ಎರ್ಮಾಯಿ ಜಲಪಾತ'. ಬೆಳ್ತಂಗಡಿಯ ಸ್ಥಾನಿಕ ಬ್ರಾಹ್ಮಣ ಸಂಘದ ಆಹ್ವಾನದ ಮೇರೆಗೆ ನಾವು ಸುಮಾರು 60 ಜನ ಸದಸ್ಯರು ಬೆಳಗ್ಗೆ 7 ಗಂಟೆಗೆ ಪಡುಬಿದ್ರಿಯಿಂದ ಹೊರಟೆವು. ಎಮ್.ಕೆ. ದಿವಾಕರ ರಾಯರ ಪ್ರಾರ್ಥನೆಯೊಂದಿಗೆ ನಮ್ಮ ಪ್ರಯಾಣ ಆರಂಭವಾಯಿತು. ಬಸ್ಸಿನಲ್ಲಿ ಮೈಕನ್ನು ಅಳವಡಿಸಲಾಗಿತ್ತು. ಎಲ್ಲರೂ ಹಾಡುತ್ತಾ, ನಲಿಯುತ್ತಾ ಬೆಳ್ತಂಗಡಿಯತ್ತ ಸಾಗಿದೆವು. 10 ಗಂಟೆಗೆ ಬೆಳ್ತಂಗಡಿ ಸಂಘದ ನೂತನ ಸಭಾಂಗಣ/ಕಾರ್ಯಾಲಯ ತಲುಪಿದೆವು. ಅಲ್ಲಿ ಬೆಳ್ತಂಗಡಿ ಸಂಘದ ಶ್ರೀ ಧನಂಜಯ ರಾವ್, ಅರುಣ್‌ರಾವ್, ಶ್ರೀಪತಿ ರಾವ್ ಹಾಗೂ ಇತರರು ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿ, ಬೆಳಗ್ಗಿನ ಉಪಹಾರ ನೀಡಿ ಸತ್ಕರಿಸಿದರು. ಇಡ್ಲಿ ಸಾಂಬಾರ್, ವಡಾ ಹಲ್ವಾ, ಉಪ್ಪಿಟ್ಟು, ಪೊಂಗಲ್, ಬಾಳೆಹಣ್ಣು ಇತ್ಯಾದಿ ವೈವಿಧ್ಯಮಯ ತಿಂಡಿಗಳು ಹೊಟ್ಟೆಯನ್ನು ತಣಿಸಿದವು. ಶ್ರೀಯುತ ಧನಂಜಯ ರಾಯರು ಅಂದಿನ ಕಾರ್ಯಕ್ರಮದ ಬಗ್ಗೆ ವಿವರಣೆ ನೀಡಿ ಎರ್ಮಾಯಿ ಜಲಪಾತದ ವೀಕ್ಷಣೆ, ಅದಕ್ಕೆ ಹೋಗುವ ತಯಾರಿ, ಜಾಗ್ರತೆ ಹಾಗೂ ಅದರ ಮಹತ್ವದ ಬಗ್ಗೆ ತಿಳಿಸಿದರು. ಮಕ್ಕಳಿಗೆ ಟ್ರಕ್ಕಿಂಗ್ ವ್ಯವಸ್ಥೆ ಮಾಡಿ, ಹಾಗೂ ವಯಸ್ಕರಿಗೆ ನಾಲ್ಕು ಜೀಪಿನ ವ್ಯವಸ್ಥೆ ಮಾಡಿ ಜಲಪಾತದ ವರೆಗೂ ಕರೆದುಕೊಂಡು ಹೋದರು. ಅವರು ನಮ್ಮ ಬಗ್ಗೆ ತೆಗೆದುಕೊಂಡ ಕಾಳಜಿಯನ್ನು ಕಂಡು ಮನದುಂಬಿ ಬಂತು. ಎಲ್ಲರೂ ಜಲಪಾತದಲ್ಲಿ ತಮ್ಮ ವಯೋಮಾನವನ್ನು ಮರೆತು ಪ್ರಕೃತಿಯ ಮಡಿಲಿನಲ್ಲಿ ಧುಮ್ಮಿಕ್ಕಿ ಹರಿಯುತ್ತಿರುವ ನೀರಿನಲ್ಲಿ ಸ್ವಚ್ಛಂದವಾಗಿ ಆಡಿದೆವು. ಆ ಕ್ಷಣದಲ್ಲಿ ನಾವು ಪಡುಬಿದ್ರಿಯ ಬದುಕನ್ನು ಮರೆತೆವೆಂದರೂ ಅಚ್ಚರಿಯಿಲ್ಲ. ಮುಂದೆ ಅಪರಾಹ್ನ 1 ಗಂಟೆಗೆ ಅಲ್ಲಿಂದ ಹಿಂದಿರುಗಿ ದೇವಸ್ಥಾನದತ್ತ ಸಾಗಿದೆವು.

ಶ್ರೀ ಸದಾಶಿವ ದೇವಸ್ಥಾನವು ಪಶ್ಚಿಮಘಟ್ಟದ ತಪ್ಪಲಲ್ಲೇ ಇದ್ದು ಸುಂದರ ತಾಣವಾಗಿದೆ. ಬಹಳ ಪುರಾತನ ದೇವಾಲಯವಾಗಿದ್ದು ಎರಡು ವರ್ಷಗಳ ಹಿಂದೆ ಜೀರ್ಣೋದ್ಧಾರಗೊಂಡಿದೆ. ಶಿವಲಿಂಗವು ಐದೂವರೆ ಅಡಿ ಎತ್ತರವಿದ್ದು ಬಹಳ ಸುಂದರವಾಗಿದೆ. ಹನುಮಂತನ ವಿಗ್ರಹವು ಉದ್ಭವ ರೂಪವಾಗಿದ್ದು ವರ್ಷದಿಂದ ವರ್ಷಕ್ಕೆ ಬೆಳೆಯುತ್ತಿದೆಯಂತೆ. ಈ ಸುಂದರ ದೇವಾಲಯವು ನಮ್ಮ ಸಮಾಜ ಬಾಂಧವರಿಂದ ನಡೆಸಲ್ಪಡುತ್ತಿದೆ ಎಂದರೆ ಬಹಳ ಹೆಮ್ಮೆಯ ವಿಷಯ. ಮಧ್ಯಾಹ್ನದ ಮಹಾಪೂಜೆಯ ನಂತರ ನಮಗೆ ಅಲ್ಲಿಯೇ ಭೋಜನದ ಏರ್ಪಾಡು ಮಾಡಿದ್ದರು. ಭೋಜನದ ನಂತರ ಚಿಕ್ಕ ಸಭಾಕಾರ್ಯಕ್ರಮವನ್ನು ನಡೆಸಿ ಬೆಳ್ತಂಗಡಿ ಸಂಘದವರು ಅಲ್ಲಿ ಉಪಸ್ಥಿತರಿದ್ದ ಪ್ರತಿಯೊಬ್ಬ ಸದಸ್ಯರ ಪರಿಚಯವನ್ನು ನಮಗೆ ಮಾಡಿದರು. ನಮ್ಮ ಸಂಘದ ವತಿಯಿಂದ ಶ್ರೀಯುತ ಎಮ್.ಕೆ. ದಿವಾಕರ ರಾವ್ ಇವರು ಮನದಾಳದ ಅಭಿನಂದನೆಗಳನ್ನು ತಿಳಿಸಿದರು. ಕುಮಾರಿ ಸ್ನೇಹಾ ಇವರು ತಮ್ಮ ಟ್ರಕ್ಕಿಂಗ್ ಅನುಭವವನ್ನು ವಿವರಿಸಿದರು. ಚಾರಣದಲ್ಲಿ ಮಾರ್ಗದರ್ಶನ ಮಾಡಿದ ಪರಮೇಶ್ವರ ರಾವ್, ವಾಸುದೇವ ರಾವ್, ಕಾರ್ತಿಕೇಯ ರಾವ್ ಮತ್ತು ವಿವೇಕಾನಂದ ರಾವ್ ಇವರನ್ನು ನೆನಪಿನಲ್ಲಿಟ್ಟು ಕೊಳ್ಳುತ್ತೇವೆ. ಬಳಿಕ ಜೀಪಿನಲ್ಲಿ ವಾಸುದೇವ ರಾಯರ ಆಮಂತ್ರಣದಂತೆ ಸಂಜೆಯ ಉಪಹಾರಕ್ಕೆ ಅವರ ಮನೆಗೆ ಹೋಗಿ ಕೊನೆಗೆ ಒಲ್ಲದ ಮನಸ್ಸಿನಿಂದ ಊರಿನತ್ತ ಪ್ರಯಾಣಿಸಿದೆವು. ಅದೇ ದಿನ ರಾತ್ರಿ ಬೆಳ್ತಂಗಡಿ ಸಂಘದ ಅಧ್ಯಕ್ಷರಾದ ಧರ್ಮಸ್ಥಳ ಲಕ್ಷ್ಮೀನಾರಾಯಣ ರಾವ್ ಇವರು ತಮ್ಮ ಅನುಪಸ್ಥಿತಿಯ ಬಗ್ಗೆ ವಿಷಾದ ವ್ಯಕ್ತಪಡಿಸಿ ಪ್ರವಾಸದ ಬಗ್ಗೆ ಕಳಕಳಿಯಿಂದ ವಿಚಾರಿಸಿದರು. ಬೆಳ್ತಂಗಡಿ ಸಂಘದವರು ಅತಿಥಿ ಸತ್ಕಾರದ ರೀತಿಯಿಂದ ಇತರರಿಂದ ಜೀವನದಲ್ಲಿ ಕಲಿತುಕೊಳ್ಳಬೇಕಾದುದು ತುಂಬಾ ಇದೆ ಎಂಬುದನ್ನು ಅರಿತೆವು. ತಮ್ಮಲ್ಲಿ ಆಗಮಿಸಿದ ಅತಿಥಿಗಳನ್ನು ಇಷ್ಟು ಕಾಳಜಿಯಿಂದ ಸತ್ಕರಿಸಿದುದು ಇತ್ತೀಚಿನ ದಿನಗಳಲ್ಲಿ ವಿಶೇಷವೇ ಸರಿ. ಇಂತಹ ಪ್ರವಾಸವನ್ನು ಏರ್ಪಡಿಸಿದ ನಮ್ಮ ಸಂಘದವರಿಗೂ ಹಾಗೂ ಮಾರ್ಗದರ್ಶನ ನೀಡಿದ ಬೆಳ್ತಂಗಡಿ ಸಂಘದವರಿಗೂ ನಾವು ಚಿರಋಣಿಗಳು.

ಶುಭಾಶಯಗಳೊಂದಿಗೆ
**ಹೆಬ್ಬಾರ್ ಎಂಟರ್‌ಪ್ರೈಸಸ್**
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.
**ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.**
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

| ಪಾಕೇಟ್ ಕ್ಯಾಲೆಂಡರ್ 2016 | | | | | ಜನವರಿ–31 ಏಪ್ರಿಲ್–30 ಜುಲೈ–31 | ಅಕ್ಟೋಬರ್–31 | ಮೇ–31 | ಫೆಬ್ರವರಿ–29 ಆಗಸ್ಟ್–31 | ಮಾರ್ಚ್–31 ನವೆಂಬರ್–30 | ಜೂನ್–30 | ಸೆಪ್ಟೆಂಬರ್–30 ಡಿಸೆಂಬರ್–31 |
|---|---|---|---|---|---|---|---|---|---|---|---|
| 1 | 8 | 15 | 22 | 29 | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು |
| 2 | 9 | 16 | 23 | 30 | ಶನಿ | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ |
| 3 | 10 | 17 | 24 | 31 | ಆದಿತ್ಯ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ |
| 4 | 11 | 18 | 25 | ★ | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ |
| 5 | 12 | 19 | 26 | ★ | ಮಂಗಳ | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ |
| 6 | 13 | 20 | 27 | ★ | ಬುಧ | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ |
| 7 | 14 | 21 | 28 | ★ | ಗುರು | ಶುಕ್ರ | ಶನಿ | ಆದಿತ್ಯ | ಸೋಮ | ಮಂಗಳ | ಬುಧ |

01-01-2017 : ಆದಿತ್ಯವಾರ ರಚನೆ : ಮ.ಮ. ಹೆಬ್ಬಾರ್, ಬೇಳಂಜೆ

## ಶ್ರೀಶಾರದಾ ಸನ್ನಿಧಿಯಿಂದ ಶ್ರೀಕ್ಷೇತ್ರ ಕಮಲಶಿಲೆಗೆ ನಮ್ಮ ಪ್ರವಾಸ

■...3ನೇ ಪುಟದಿಂದ

ಹಿಂದೆ ವಸುಚಕ್ರವರ್ತಿಯು ಕಮಲಶಿಲೆಗೆ ಬಂದು ಕುಬ್ಜಾ ನದಿ ದಂಡೆಯಲ್ಲಿರುವ ಬ್ರಾಹ್ಮೀ ದೇವಿಯನ್ನು ಪ್ರಾರ್ಥಿಸುತ್ತಾನೆ. ಈ ನದಿಯಲ್ಲಿ ಸ್ನಾನ ಮಾಡಿದ ತನ್ನ ಜೀವನ ಪಾವನವಾಯಿತು ಎಂದು 'ಪೌರಾಣೀ' ಎಂಬ ವ್ರತವನ್ನು ಆಚರಿಸಿದನು. ಅವನು ಬ್ರಾಹ್ಮೀ ದುರ್ಗಾದೇವಿಯನ್ನು ಆರಾಧಿಸಿ ಮೋಕ್ಷ ಹೊಂದುತ್ತಾನೆ.

ಸಹ್ಯ ಪರ್ವತದ ಬುಡದಲ್ಲಿ ವೇದಸಖನೆಂಬ ವಿಪ್ರೋತ್ತಮನು ಪತ್ನಿ ಪುಣ್ಯವರ್ಧಿನಿಯೊಂದಿಗೆ ವಾಸಿಸುತ್ತಿದ್ದನು. ಅತಿಥಿ ಸತ್ಕಾರ ಮಾಡದೆ ಕಷ್ಟ-ನಷ್ಟವನ್ನು ಅನುಭವಿಸಿದ ಅವನು ಕೊನೆಗೆ ಅನನ್ಯ ಭಕ್ತಿಯಿಂದ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ಯನ್ನು ಪ್ರಾರ್ಥಿಸಿದನು. ವೇದಸಖನ ಸ್ವಪ್ನದಲ್ಲಿ ಶ್ರೀ ಬ್ರಾಹ್ಮೀ ದೇವಿಯು ಪ್ರತ್ಯಕ್ಷಳಾಗಿ ವರಪ್ರದಾನ ಮಾಡಿದಳು. ದೇವಿಯ ವರದಂತೆ ಕಳೆದುಕೊಂಡ ಎಲ್ಲವನ್ನೂ ಪಡೆದು ಎಲ್ಲಾ ಸೌಭಾಗ್ಯಗಳಿಂದ ಅನೇಕ ವರ್ಷಗಳ ಕಾಲ ಬಾಳಿ, ಬದುಕಿ ಮತ್ತೆ ಮೋಕ್ಷ ಹೊಂದುತ್ತಾನೆ.

ಕುಬ್ಜಾ ನದಿಯ ಬಗ್ಗೆ ಸಂಕ್ಷಿಪ್ತವಾಗಿ ನಾವು ಈಗ ತಿಳಿದುಕೊಳ್ಳೋಣ. ನಾಟ್ಯ ಕೋಕಿಲೆ ಪಿಂಗಲಾ ಒಂದು ಸಂಧ್ಯಾಕಾಲದಲ್ಲಿ ಶಿವ-ಪಾರ್ವತಿಯರ ಎದುರು ನಾಟ್ಯವನ್ನು ಮಾಡುವುದಿಲ್ಲ. ಕ್ರೋಧಗೊಂಡ ಪಾರ್ವತಿ ಯಿಂದ ಅಂಕುಡೊಂಕಿನ ಗೂನುಬೆನ್ನಿನ ಕುಬ್ಜೆಯಾಗುವಂತೆ ಪಿಂಗಲ ಶಾಪ ಪಡೆದಳು. ಶಾಪ ವಿಮೋಚನಾ ದಾರಿಯನ್ನೂ ಅವಳು ಪಡೆಯುತ್ತಾಳೆ. ಕಂಸನಿಗೆ ಸುಗಂಧ ದ್ರವ್ಯಗಳನ್ನು ಸಾಗಿಸುವ ಕೆಲಸದಲ್ಲಿ ನಿರತಳಾಗಿರುತ್ತಾಳೆ. ಕಂಸ ವಧೆಗಾಗಿ ಶ್ರೀಕೃಷ್ಣ ಬಲರಾಮರು ಬರುವಾಗ ದಾರಿಯಲ್ಲಿ ಸಿಗುತ್ತಾಳೆ. ಶ್ರೀಕೃಷ್ಣನ ಆಲಿಂಗನದಿಂದ ಅವಳ ಶಾಪ ವಿಮೋಚನೆಯಾಗಿ ಕುಬ್ಜತ್ವ ನಿವಾರಣೆಯಾಗುತ್ತದೆ. ಶ್ರೀ ಬ್ರಾಹ್ಮೀ ದುರ್ಗಾಂಬೆಯನ್ನು ಸ್ತುತಿಸುತ್ತಾಳೆ. ಹೀಗೆ ಕುಬ್ಜಾ ನದಿ ನೇರವಾಗಿ ಹರಿಯದೆ ಅಂಕುಡೊಂಕಾಗಿ ಹರಿಯುವುದರಿಂದ ಕುಬ್ಜಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.


ಸುಮಾರು ಗಂಟೆ 1-30 ಆಗಿತ್ತು. ನಾವೆಲ್ಲರೂ ದೇವಸ್ಥಾನದಲ್ಲಿ ಭೋಜನ ಮಾಡಿದೆವು. ಬಹಳ ರುಚಿಕರವಾದ ಭೋಜನದ ವ್ಯವಸ್ಥೆ ಆದಾಗಿತ್ತು. ಹೊಟ್ಟೆತುಂಬುವಷ್ಟು ಭೋಜನ ಮಾಡಿದೆವು. ಇನ್ನು ಸ್ವಲ್ಪ ವಿಶ್ರಾಂತಿ.

ಶ್ರೀಕ್ಷೇತ್ರ ಕಮಲಶಿಲೆಯಿಂದ ಸುಮಾರು 2 ಕಿಲೋಮೀಟರ್ ದೂರದಲ್ಲಿ ಸುಪಾರ್ಶ್ವ ಗುಹೆಯನ್ನು ನೋಡಲು ಹೊರಟೆವು. ಸುಪಾರ್ಶ್ವ ರಾಜನಿಂದ ಈ ಗುಹೆಯು ಲೋಕಕ್ಕೆ ಪರಿಚಿತವಾದ್ದರಿಂದ 'ಸುಪಾರ್ಶ್ವ' ಗುಹೆ ಎಂಬ ಹೆಸರು ಪ್ರಖ್ಯಾತವಾಯಿತು. ಎಲ್ಲರೂ ಗುಹೆಯ ಒಳಗೆ ಹೋದರು. ಕೆಲವರು ಮಾತ್ರ ಹೊರಗೆ ಉಳಿದರು. ಹಿಂದೆ ಕೃತ ಯುಗದಲ್ಲಿ ಸುಪಾರ್ಶ್ವನೆಂಬ ಚಕ್ರವರ್ತಿಯು ತಪಸ್ಸನ್ನು ಆಚರಿಸಿ ಮೋಕ್ಷ ಹೊಂದುವ ಸಂಕಲ್ಪವನ್ನು ಮಾಡುತ್ತಾನೆ. ಶಿವ ಪ್ರೇರಣೆಯಾಗಿ ಅವನು ಶ್ರೀಕ್ಷೇತ್ರ ಕಮಲಶಿಲೆಗೆ ಬರುತ್ತಾನೆ. ಅಲ್ಲಿ ಈ ಗುಹೆಯನ್ನು ನೋಡುತ್ತಾನೆ. ತಪಸ್ಸನ್ನು ಆಚರಿಸುವಾಗ ತೊಂದರೆ ಬಾರದಂತೆ ಶಿವ ತನ್ನ ಗಣ ಭೈರವನನ್ನು ನೇಮಿಸುತ್ತಾನೆ. ಸುಪಾರ್ಶ್ವ ರಾಜನು ಅನೇಕ ವರ್ಷಗಳ ವರೆಗೆ ಗುಹೆಯಲ್ಲಿ ಕಠಿಣವಾದ ತಪಸ್ಸನ್ನು ಮಾಡಿ ಶಿವಸಾಯುಜ್ಯ ಹೊಂದುತ್ತಾನೆ. ಈಗಲೂ ಗುಹೆಯ ಎದುರಿನಲ್ಲಿ ಸಿದ್ಧೇಶ್ವರ ಭೈರವನ ಮೂರ್ತಿಯಿದೆ. ಎಡಬಲಗಳಲ್ಲಿ ವ್ಯಾಘ್ರಗುಹೆ (ದೇವಿ ವಾಹನ ಹುಲಿ ವಾಸ ಮಾಡುತ್ತಿದ್ದ ಸ್ಥಳ) ಇದೆ. ಆದಿಶಕ್ತಿಯ ಉದ್ಭವ ಲಿಂಗಗಳು, ನಾಗನ ಸನ್ನಿಧಿ ಇಲ್ಲಿ ಇದೆ.

ಈಗ ಎಲ್ಲರೂ ಹಿಂದೆ ದೇವಸ್ಥಾನಕ್ಕೆ ಬಂದೆವು. ದೇವಸ್ಥಾನದ ಅಂಗಣದಲ್ಲಿ ಶ್ರೀ ಮಹೇಶ್ ರಾವ್ ಇವರು ರಂಗೋಲಿ ಮಾಡುತ್ತಿದ್ದುದನ್ನು ನೋಡಿದೆವು. ಶ್ರೀ ವಸಂತರಾವ್ ಕರಂಬಳ್ಳಿ ಯವರ ಮಗಳು ವಿಜೇತ ರಾವ್ ಇವರಿಂದಲೂ ರಂಗೋಲಿ ಧ್ವಜ ಸ್ತಂಭದ ಸುತ್ತ ಮಾಡಲ್ಪಟ್ಟಿತು. ಇವರೀರ್ವರ ರಂಗೋಲಿ ಬಹಳ ಆಕರ್ಷಕ ವಾಗಿದ್ದುವು. ಆಗಲೇ ಸಂಜೆ 4-30 ಗಂಟೆ ಆಗಿತ್ತು. ಇನ್ನು ಮುಂದೆ ಮೆಕ್ಕಿಕಟ್ಟೆಗೆ ಪ್ರಯಾಣ ಮಾಡಿದೆವು.

ಬಾರಕೂರಿನಿಂದ 7 ಮೈಲು ದೂರದಲ್ಲಿ ಶಿರಿಯಾರ ಗ್ರಾಮವಿದೆ. ಅಲ್ಲಿ ಮೆಕ್ಕಿಕಟ್ಟೆ ಎಂಬ ಜಾಗದಲ್ಲಿ ನಂದಿಕೇಶ್ವರ ದೇವಸ್ಥಾನ ಇದೆ. ಇಲ್ಲಿ ಭೂತಾಕಾರದ ಸುಮಾರು ನೂರೈವತ್ತು ಮರದ ವಿಗ್ರಹಗಳು ಇವೆ. ಇವು ಬಣ್ಣದ ವಿಗ್ರಹಗಳು. ಒಂದೇ ಕಡೆ ಜೋಡಿಸಲ್ಪಟ್ಟಿವೆ. ನೋಡಿದಾಗ ಭೂತಗಳನ್ನು ನೋಡಿದ ಹಾಗೆ ಆಗುತ್ತದೆ. ವಿಗ್ರಹಗಳಿರುವ ವಾತಾರವಣ ಭಯಂಕರ ಪರಿಸ್ಥಿತಿಯನ್ನು ಉಂಟು ಮಾಡುತ್ತದೆ. ಈಗಿನ ವಿಗ್ರಹಗಳು ಹೊಸ ವಿಗ್ರಹಗಳು ಎಂದು ಕೆಲವರು ಹೇಳುತ್ತಾರೆ. ವಿಗ್ರಹಗಳಲ್ಲಿನ ಕೌಶಲ್ಯವನ್ನು ಮೆಚ್ಚಲೇ ಬೇಕು. ವಕ್ಕೋಡು ನಂದಿ, ಉಮ್ಮಲ್ಯ, ಹಾಯಿಗುಳಿ, ಯಕ್ಷಿಣಿ, ರಕ್ತ ಪಂಜುರ್ಲಿ, ಬ್ರಹ್ಮರಾಯ, ಜಟ್ಟಿ, ಹುಲಿ, ಇತ್ಯಾದಿ ಭೂತಗಳ ವಿಗ್ರಹಗಳು ಇವು. ಸ್ಥಳ ಪುರಾಣದ ಕತೆಯಂತೆ ಹಿಂದೆ ಪರಮೇಶ್ವರನು ತನ್ನ ಭೂತಗಣಗಳೊಂದಿಗೆ ಮೆಕ್ಕಿಕಟ್ಟೆ ದಾರಿಯಾಗಿ ಪಯಣಿಸಿದ. ಭೂತಗಣಗಳು ಇನ್ನು ಮುಂದುವರಿಯದ ಹಾಗೆ ಪರಮೇಶ್ವರನನ್ನು ಬೇಡಿಕೊಂಡು, ಅಲ್ಲಿ ವಾಸಿಸಲು ಅವಕಾಶ ನೀಡಬೇಕೆಂದು ಕೇಳಿಕೊಂಡರು. ಈ ಸ್ಥಳದ ಹತ್ತಿರ ಸ್ವಾ ಬರ ಕಟ್ಟೆ ಎಂಬ ಜಾಗವೂ ಇದೆ. ಬಾರ್ಕೂರು ಮತ್ತು ಮೆಕ್ಕಿಕಟ್ಟೆಗೂ ಸಂಬಂಧವಿದೆ ಎಂದು ಕೆಲವರು ತಿಳಿಸುತ್ತಾರೆ. ಮೆಕ್ಕಿಕಟ್ಟೆಯಲ್ಲಿ ನಾವು ವಡೆ ಮತ್ತು ಚಾ ಪಾನ ಮಾಡಿದೆವು. ಅಲ್ಲಿ ಆಟೋಟಗಳ ವ್ಯವಸ್ಥೆಯೂ ಇತ್ತು. ಕೆಲವರು ಬಹುಮಾನವನ್ನು ಪಡೆದರು. ಮೆಕ್ಕಿಕಟ್ಟೆಯಿಂದ ನಾವೆಲ್ಲರೂ ಸೀದಾ ಉಡುಪಿಗೆ ಗಂಟೆ 7-30ಕ್ಕೆ. ಪ್ರಯಾಣ ಮಧ್ಯೆ 'ಮಾ' ತಂಪು ಪಾನೀಯ ಮತ್ತು 'ಸಾಲ್ಟ್ ಕಿಸ್' ಬಿಸ್ಕೆಟ್ಸ್ ಇತ್ಯಾದಿ ನೀಡಲ್ಪಟ್ಟವು.

ವ್ಯವಸ್ಥಿತವಾದ ಈ ಪ್ರವಾಸ ಏನೂ ಪ್ರಯಾಸ ವಿಲ್ಲದೇ ರೂಪುಗೊಂಡಿತ್ತು. ಮುಂದಾಳತ್ವ ವಹಿಸಿದ ಯುವ ಮತ್ತು ಕ್ರೀಡಾ ವೇದಿಕೆಯ ಪದಾಧಿ ಕಾರಿಗಳಾದ ಶ್ರೀ ವಸಂತರಾವ್ ಕರಂಬಳ್ಳಿ, ಶ್ರೀ ಕೃಷ್ಣಾನಂದ ರಾವ್ ಉಂಡಾರು, ಶ್ರೀ ಟಿ. ಜಗದೀಶ ರಾವ್, ಅಧ್ಯಕ್ಷರಾದ ಶ್ರೀ ವೈ. ಭುವನೇಂದ್ರ ರಾವ್, ಕಾರ್ಯದರ್ಶಿಗಳಾದ ಕೊಕ್ರಾಡಿ ಶ್ರೀ ಸುರೇಶ್ ರಾವ್, ಜೊತೆ ಕಾರ್ಯದರ್ಶಿಗಳಾದ ಶ್ರೀ ಐ.ಕೆ. ಜಯಚಂದ್ರ ರಾವ್ ಇವರಿಗೆ ಅನಂತ ಕೃತಜ್ಞತೆಗಳು.

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಯಾಟಿ (ನಿ.)

**ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408**

### ಪ್ರಕಟಣೆ

ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಯಾಟಿ (ನಿ.) ಇದರ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿಯ ಸದಸ್ಯರ ಆಯ್ಕೆಗಾಗಿ ಸಂಘದ ಪ್ರಧಾನ ಕಛೇರಿಯ ವಠಾರದಲ್ಲಿ ದಿನಾಂಕ 29-02-2016ರಂದು ಪೂರ್ವಾಹ್ನ 9-00 ಗಂಟೆಯಿಂದ ಅಪರಾಹ್ನ 4-00 ಗಂಟೆಯ ವರೆಗೆ ಚುನಾವಣೆ ಜರಗಲಿದ್ದು, ಸ್ಪರ್ಧಿಸಲಿಚ್ಛಿಸುವ ಸಂಘದ ಅರ್ಹ ಸದಸ್ಯರು ತಮ್ಮ ನಾಮಪತ್ರವನ್ನು ಸಂಘದ ಪ್ರಧಾನ ಕಛೇರಿಯಲ್ಲಿ ಪಡೆದು ದಿನಾಂಕ 14-02-2016ರಿಂದ 21-02-2016ರ ವರೆಗೆ ಪೂರ್ವಾಹ್ನ 11-00ರಿಂದ ಮಧ್ಯಾಹ್ನ 2-00 ಗಂಟೆಯ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ.

ಸಹಿ/-

ಚುನಾವಣಾ ನಿರ್ವಹಣಾಧಿಕಾರಿ

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ : **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.26-02-2016) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.03-03-2016 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.27-02-2016 ಹಾಗೂ ತಾ.13-03-2016 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀಶಾರದಾ ತುರ್ತು ಸೇವಾ ಸಮಿತಿ

**ಉಡುಪಿಯ ಸಮಾಜ ಬಾಂಧವರಿಗೆ ಯಾವುದೇ ರೀತಿಯ ತುರ್ತು ಸಹಾಯ ಅಗತ್ಯ ಬಿದ್ದಲ್ಲಿ ತುರ್ತು ಸೇವಾ ಸಮಿತಿಯನ್ನು ರಚಿಸಿಲಾಗಿದೆ. ಸಮಿತಿಯ ಸದಸ್ಯರ ದೂರವಾಣಿ ಸಂಖ್ಯೆ ಈ ಕೆಳಗೆ ಕೊಡಲಾಗಿದೆ ಅಗತ್ಯವಿದ್ದಾಗ ಸಮಾಜ ಬಾಂಧವರು ಇದರ ಸದುಪಯೋಗ ಮಾಡಿಕೊಳ್ಳಬಹುದು.**

| | | | |
|---|---|---|---|
| 1. | ಕರಂಬಳ್ಳಿ ವಸಂತ ರಾವ್ | - | 9632291183 |
| 2. | ಉಂಡಾರು ಕೃಷ್ಣಾನಂದ ರಾವ್ | - | 9164581333 |
| 3. | ನಂದಳಿಕೆ ಪ್ರವೀಣ ಕುಮಾರ್ ರಾವ್ | - | 9343572490 |
| 4. | ನಂದಳಿಕೆ ಉಮೇಶ್ ರಾವ್ | - | 8970504176 |
| 5. | ಹೆರ್ಗ ನಿರಂಜನ ರಾವ್ | - | 9902196175 |
| 6. | ಕೆರೆಬೆಟ್ಟು ಲಕ್ಷ್ಮೀನಾರಾಣ ಹೆಬ್ಬಾರ | - | 9448252736 |
| 7. | ಮಹೇಶ್ | - | 7259914498 |
| 8. | ಟಿ.ಜಗದೀಶ ರಾವ್ | - | 9686123905 |
| 9. | ಪುತ್ತಿಗೆ ಸುಬ್ರಹ್ಮಣ್ಯ ರಾವ್ | - | 9945379479 |
| 10. | ಅಜಿತ್ ರಾವ್ ಬೈಲೂರು | - | 9448108920 |
| 11. | ಆದ್ಯಪಾಡಿ ಮೋಹನದೇವ್ | - | 0820-2535328 |
| 12. | ವೈ. ಭುವನೇಂದ್ರ ರಾವ್ | - | 9448428330 |
| 13. | ಡಾ। ವೈ. ಸುದರ್ಶನ್ ರಾವ್ | - | 9845136322 |
| 14. | ಕುತ್ಪಾಡಿ ಸುರೇಶ್ ರಾವ್ | - | 9483242111 |
| 15. | ವೈ. ಪ್ರಕಾಶ್ ಕುಮಾರ್ | - | 9448445617 |
| 16. | ವೈ. ಪ್ರಸಾದ್ ಕುಮಾರ್ | - | 9036252105 |
| 17. | ಪರೀಕ ಚಂದ್ರಶೇಖರ ರಾವ್ | - | 9591893091 |
| 18. | ಬಿ. ಜಯರಾಮ ರಾವ್ | - | 9844545040 |
| 19. | ಎಮ್.ಪಾಲಚಂದ್ರ ರಾವ್ | - | 0820-2521366 |
| 20. | ಕೆ. ವೆಂಕಟ್ ರಾವ್ | - | 9480016125 |
| 21. | ಎಸ್.ಎಮ್.ರಾವ್ | - | 9449914040 |
| 22. | ಐ.ಕೆ.ಜಯಚಂದ್ರ ರಾವ್ | - | 9448331683 |



**ಎಮ್. ದೇವಾನಂದ್ ಭಟ್**

Cell : 9845644556
9483913344


ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-**574213** (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - **574 164** (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


॥ ಶ್ರೀ ವಿಷ್ಣುಮೂರ್ತಿ ಪ್ರಸನ್ನಃ ॥ ॥ ಶ್ರೀ ಮಹಾಗಣಪತಿ ಪ್ರಸನ್ನಃ ॥

॥ ಶ್ರೀ ಶಾಸ್ತವು ಪ್ರಸನ್ನಃ ॥

ಸಮಾಜ ಬಾಂಧವರೇ,

**ಶ್ರೀ ಪಾದೆಬೆಟ್ಟು ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿ ಹಾಗೂ ಶ್ರೀ ಶ್ರೀ ವಿದುಶೇಖರ ಭಾರತೀ ತೀರ್ಥ ಸ್ವಾಮಿಗಳ ಪರಮಾಶೀರ್ವಾದದಿಂದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ**

## 'ವೈದಿಕ ಶಿಬಿರ'ವು

ತಾ.01-05-2016ರ ಭಾನುವಾರ ಬೆಳಿಗ್ಗೆ 12-00 ಗಂಟೆಗೆ ಉದ್ಘಾಟನೆಗೊಂಡು ತಾರೀಕು 15-05-2016ರ ಭಾನುವಾರದ ವರೆಗೆ ನಡೆಯಲಿರುವುದು. ಈ ವೈದಿಕ ಶಿಬಿರದಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ.

ಇದರ ಪ್ರಾಯೋಜಕತ್ವವನ್ನು ಬೆಂಬಲಿಸುವವರು

- **ಎಬಿಸಿಡಿ ಆಂಡ್ ಇ ಟ್ರಸ್ಟ್ ಇನ್ನ.**
- **ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಚಾರಿಟೇಬಲ್ ಟ್ರಸ್ಟ್ ಎಲ್ಲೂರು.**
- **ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ.**
- **ಆಡಳಿತ ಮಂಡಳಿ ವಿಷ್ಣುಮೂರ್ತಿ ದೇವಸ್ಥಾನ ಪಾದೆಬೆಟ್ಟು**

ಸೂಚನೆ :

1) ಭಾಗವಹಿಸುವ ವಟುಗಳಿಗೆ ವಯೋಮಿತಿ ಇರುವುದಿಲ್ಲ.
2) ವಟುಗಳು ಬರುವಾಗ ಕೌಳಿಗೆ ಸೌಟು, ಹರಿವಾಣ, ದಿನನಿತ್ಯದ ಉಪಯೋಗದ ಬಟ್ಟೆಗಳನ್ನು ತರಬೇಕು.
3) ವಟುಗಳಿಗೆ ಉಳಿದುಕೊಳ್ಳುವ ವ್ಯವಸ್ಥೆ, ತಿಂಡಿ, ಊಟೋಪಚಾರದ ವ್ಯವಸ್ಥೆ ಹಾಗೂ ವೈದ್ಯಕೀಯ ವ್ಯವಸ್ಥೆಯು ಇರುತ್ತದೆ.
4) ಸಮಾಜ ಬಾಂಧವರಿಗೆ ಶ್ರೀ ಕ್ಷೇತ್ರದಲ್ಲಿ ಬ್ರಹ್ಮಚಾರಿ ಆರಾಧನೆ ನಡೆಸುವರೆ, ಈ ದಿನಗಳಲ್ಲಿ ವ್ಯವಸ್ಥೆ ಇರುತ್ತದೆ.
5) ಈ ಕಾರ್ಯಕ್ರಮಕ್ಕೆ ಸಮಾಜ ಬಾಂಧವರ ಸಹಕಾರ ಬಯಸುತ್ತೇವೆ.

**ಸಂಪರ್ಕಿಸಿ : ಎಂ.ಕೆ.ದಿವಾಕರ ರಾವ್-9902169119, ಕೃಷ್ಣರಾಜ ಭಟ್-9980195355, ಜಯರಾಮರಾವ್-9743159540, ಡಾ। ವೈ. ಸುದರ್ಶನ ರಾವ್-9845136322, ಸುಧಾಕರ ಬೆಳ್ಳೆ-9845193103, ಲಕ್ಷ್ಮೀಕಾಂತ ರಾವ್-9448156413**

## ಶ್ರೀಶಾರದಾ ವೇದಿಕೆ - ಪ್ರಕಟಣೆ

**ಪತ್ರಿಕೆಯ ವಿಳಾಸ : ಸಂಪಾದಕರು, ಶ್ರೀ ಶಾರದ ಪತ್ರಿಕೆ, ಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102.**
**ಇ-ಮೇಯ್ಲ್ : srisharadaudupi@gmail.com ಹಾಗೂ sudarshany@rediffmail.com**
**ವೆಬ್‌ಸೈಟ್ : www.srisharada.org ವಾಟ್ಸ್ ಆ್ಯಪ್ ನಂಬ್ರ : 9845136322**
**ಶಾರದ ಮಂಟಪದ ಮ್ಯಾನೇಜರ್ : 0820-2520754, 9448108920**

### ಶ್ರೀಶಾರದಾ ವೇದಿಕೆಗೆ ಸದಸ್ಯತನ ಶುಲ್ಕ

| | | |
|---|---|---|
| ಆಜೀವಸದಸ್ಯರು | : | ರೂ.500/- |
| ದಾನಿಗಳು | : | ರೂ.1000/- |
| ಪೋಷಕರು | : | ರೂ.5000/- |
| ಮಹಾಪೋಷಕರು | : | ರೂ.10000/- |



### ಜಾಹೀರಾತುದರ

| | | |
|---|---|---|
| ಕಲರ್ ಪುಟದ 1/3ನೇ ಭಾಗ 12 ತಿಂಗಳುಗಳಿಗೆ | : | ರೂ.12000/- |
| ಕಲರ್ ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದುಬಾರಿಗೆ | : | ರೂ.1000/- |
| ಕಪ್ಪು ಬಿಳುಪು ಪುಟದ 1/6ನೇ ಭಾಗ ಶುಭಾಶಯ ಇತ್ಯಾದಿ ಜಾಹೀರಾತು ಒಂದು ಬಾರಿಗೆ | : | ರೂ.500/- |
| ಕಪ್ಪು ಬಿಳುಪು ಪುಟದ 2 ಇಂಚು 2 ಕಾಲಂ 12 ತಿಂಗಳುಗಳಿಗೆ | : | ರೂ.1500/- |

ಈ ಶುಲ್ಕವನ್ನು ತಮ್ಮ ಹೆಸರು ವಿಳಾಸದೊಂದಿಗೆ, ನಗದು, ಚೆಕ್ ಅಥವಾ ಡಿ.ಡಿ. ಮುಖಾಂತರ ಸಲ್ಲಿಸಬಹುದು ಅಥವಾ ಸಿಂಡಿಕೇಟ್ ಬ್ಯಾಂಕ್, ಕಾರ್‌ಸ್ಟ್ರೀಟ್ ಬ್ರಾಂಚ್, ಬ್ಯಾಂಕಿನ ಖಾತೆಗೆ ನೇರವಾಗಿ ಜಮಾ ಮಾಡಿ ಅದರ ರಶೀದಿಯನ್ನು ಮೇಲಿನ ನಮ್ಮ ಇ-ಮೇಯ್ಲ್/ವಾಟ್ಸ್‌ಆ್ಯಪ್ ವಿಳಾಸಕ್ಕೆ ಕಳುಹಿಸಬಹುದು.

**ಸಮಾಜ ಬಾಂಧವರು ಪತ್ರಿಕೆಯನ್ನು ತುಂಬು ಹೃದಯದಿಂದ ಪ್ರೋತ್ಸಾಹಿಸುವಂತೆ ವಿನಂತಿ**


*Krishna Rao* Mob. : 9902029048


KISHAN
Studio & Video


Indoor Photography & Port Folio Photography, Video & Mixing, Lamination

MAIN ROAD, MAJOOR & BANTAKAL.

## ‘ವಿಪ್ರಶ್ರೀ’ ಉದ್ಘಾಟನೆ

ಬ್ರಾಹ್ಮಣ ಮಹಾಸಭೆ ಕೊಡವೂರು (ರಿ) ಕ್ರೋಢಾಶ್ರಮ ಉಡುಪಿ ಇದರ ಸಾಂಸ್ಕೃತಿಕ ಕಲಾಭವನ, ವಿಪ್ರಶ್ರೀ ಇದರ ಉದ್ಘಾಟನೆಯು ತಾ.17-01-2016 ರಂದು ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಂದ ನೆರವೇರಿತು. ಬ್ರಾಹ್ಮಣ ಮಹಾಸಭೆ ಕೊಡವೂರು (ರಿ.) ಇದರ ಗೌರವಾಧ್ಯಕ್ಷರಾಗಿ ನಮ್ಮವರಾದ ಶ್ರೀ ಪಿ. ಗುರುರಾಜ ರಾವ್ ಸೇವೆ ಸಲ್ಲಿಸುತ್ತಿದ್ದಾರೆ.

## ಬಾರಕೂರು ಮಾಸ್ತಿಯಮ್ಮನವರ ದೇವಸ್ಥಾನ

ಬಾರಕೂರು ಶ್ರೀ ಮಾಸ್ತಿಅಮ್ಮನವರ ದೇವಸ್ಥಾನ, ಧರ್ಮಶಾಲೆಯಲ್ಲಿ ತಾ.15-12-2015ರಿಂದ ತಾ.17-12-2015ರ ತನಕ ವಾರ್ಷಿಕೋತ್ಸವ ಹಾಗೂ ಢಕ್ಕೆ ಬಲಿ ಸೇವೆ ಹಾಗೂ ಅನ್ನ ಸಂತರ್ಪಣೆಯು ನೆರವೇರಿತು. ಆ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ವೇದಮೂರ್ತಿ ವಿದ್ವಾನ್ ಶ್ರೀ ಹರಿನಾರಾಯಣ ಅಸ್ರಣ್ಣರವರ ಆಶೀರ್ವಚನ, ಲಲಿತಾ ಸಹಸ್ರನಾಮ, ಪಾರಾಯಣ ನೆರವೇರಿತು. ಶ್ರೀ ರಾಘವೇಂದ್ರ ಸೇರಿಗಾರ ಮತ್ತು ಬಳಗದವರ ಸ್ಯಾಕ್ಸೋಫೋನ್ ಕಛೇರಿ ವಿಶೇಷ ಆಕರ್ಷಣೆಯಾಗಿತ್ತು.

## ಶರದಿ ದಿನೇಶ್ ರಾವ್



ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ವತಿಯಿಂದ ನಡೆದ ಕರ್ನಾಟಕ ಶಾಸ್ತ್ರೀಯ ಸಂಗೀತ ಪರೀಕ್ಷೆ ಜೂನಿಯರ್ ವಿಭಾಗದಲ್ಲಿ ಶರದಿ ದಿನೇಶ್ ರಾವ್ ಅಂಕಗಳೊಂದಿಗೆ ಪ್ರಥಮ ಸ್ಥಾನಗಳಿಸಿದ್ದಾರೆ. ಇವರು ಶಾಂತಾಲಯ ಸಂಗೀತ ಸಂಸ್ಥೆಯ ದಿಶಾ ಪ್ರಕಾಶ್ ರಾವ್ ರವರ ಶಿಷ್ಯೆ. ಇವಳು ದಿನೇಶ್ ಡಿ. ಮತ್ತು ಸಂಧ್ಯಾರಾವ್ ದಂಪತಿಗಳ ಮಗಳು.

## ಗೃಹಪ್ರವೇಶ

ಉಡುಪಿ ಬೈಲೂರಿನ ಶ್ರೀಮತಿ ಗೀತಾ ಸದಾಶಿವ ರಾಯರ ಪುತ್ರ ಶ್ರೀ ರಾಜೇಶ್ ರಾವ್ ಮತ್ತು ಶ್ರೀಮತಿ ಸ್ವಾತಿ ರಾವ್ ದಂಪತಿಗಳು ತಾ.31-01-2016ರ ರವಿವಾರ ಪುಣೆಯ ಹಡಪ್ಸರ್‌ನಲ್ಲಿರುವ ಡ್ರೀಮ್ಸ್ ಎಲಿನಾ ವಸತಿ ಸಮುಚ್ಚಯದಲ್ಲಿ ತಮ್ಮ ಮನೆಯ ಗೃಹಪ್ರವೇಶವನ್ನು ನೆರವೇರಿಸಿದರು.

## ಕುಂಭ ಮಾಸದ ವಿಶೇಷ ದಿನಗಳು

| | |
|---|---|
| 18-02-2016 | ಸರ್ವೈಕಾದಶಿ |
| 26-02-2016 | ಸಂಕಷ್ಟಹರ ಚತುರ್ಥಿ |
| 28-02-2016 | ಶಿಕ್ಷಣ ತರಬೇತಿ ಕಾರ್ಯಕ್ರಮ |
| 05-03-2016 | ಸರ್ವೈಕಾದಶಿ |
| 07-03-2016 | ಮಹಾಶಿವರಾತ್ರಿ |
| 14-03-2016 | ಮೀನ ಸಂಕ್ರಮಣ<br>ಶ್ರೀಶಾರದಾ ಪ್ರತಿಷ್ಠಾ ಮಹೋತ್ಸವ |
| 19-03-2016 | ಸರ್ವೈಕಾದಶಿ |

## ನಿಧನ

### ಸದಾಶಿವ ರಾವ್

ಎರ್ಮಾಳು ರಾಮನಿವಾಸದ ನಿವಾಸಿ ಶ್ರೀ ಎರ್ಮಾಳು ಸದಾಶಿವ ರಾಯರು ತಾ.15-01-2016 ರಂದು ಅಲ್ಪಕಾಲದ ಅಸೌಖ್ಯದಿಂದಾಗಿ ನಿಧನ ಹೊಂದಿದರು.

★★★★ ★★★★

### ಗಿರಿಜಾ ರಾವ್

ರಾಮಸದನ ಕೊಟ್ಟಾರಚೌಕಿ ಮಂಗಳೂರು ಇಲ್ಲಿಯ ನಿವಾಸಿ ಗಿರಿಜಾ ರಾವ್ (ದಿ. ಯು.ಕೃಷ್ಣ ಪ್ರಸಾದರ ಧರ್ಮಪತ್ನಿ) ತಾ.09-01-2016ರಂದು ನಿಧನ ಹೊಂದಿದರು.

★★★★ ★★★★

### ಸತೀಶ್ ರಾವ್

ನಿವೃತ್ತ ಸೈನಿಕ, ಮಾಜಿ ಸೈನಿಕ ಸಂಘದ ಉಪಾಧ್ಯಕ್ಷ ಆರ್.ಎಸ್.ಎಸ್. ಕಾರ್ಯಕರ್ತ ಕನ್ಯಾಡಿ ನಿವಾಸಿ ಶ್ರೀ ಸತೀಶ್ ರಾವ್ (63) ತಾ.10-01-2016ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಶ್ರೀಯುತರು 15 ವರ್ಷ ಭೂಸೇನೆಯಲ್ಲಿ ಸೇವೆ ಸಲ್ಲಿಸಿ 1971ರ ಬಾಂಗ್ಲಾ ವಿಮೋಚನೆಯ ಯುದ್ಧದಲ್ಲಿ ಭಾಗವಹಿಸಿದ್ದರು.

★★★★ ★★★★

### ಅನುಸೂಯ

ಕುಂಟಲ್ಪಾಡಿ ಕಾರ್ಕಳದ ನಿವಾಸಿ ದಿ. ಪ್ರಭಾಕರ ರಾಯರ ಧರ್ಮಪತ್ನಿ ಶ್ರೀಮತಿ ಅನುಸೂಯ ದಿ.21-01-2016ರ ಗುರುವಾರ ದೈವಾಧೀನರಾಗಿರುತ್ತಾರೆ.

★★★★ ★★★★

### ವಿಜಯಕುಮಾರ್ ರಾವ್

ಕಿನ್ನಿಮೂಲ್ಕಿಯ ನಿವಾಸಿ ಶ್ರೀ ವಿಜಯಕುಮಾರ್ ರಾವ್‌ರವರು ದಿ.27-01-2016ರಂದು ಅಲ್ಪಕಾಲದ ಅಸ್ವಾಸ್ಥ್ಯದಿಂದ ನಿಧನ ಹೊಂದಿದರು.

## ಶುಭ ಜನನ

ಶ್ರೀಯುತ ಮರ್ದಂಬೈಲು ಉಮೇಶ ರಾಯರ ಕಿರಿಯಪುತ್ರ ಡಾ|ಸುನಿಲ್‌ಕೃಷ್ಣ ಮತ್ತು ಡಾ|ಪೂರ್ವಿ ದಂಪತಿಗಳಿಗೆ ದಿನಾಂಕ 20-01-2016 ನೇ ಬುಧವಾರ ಗಂಡು ಮಗುವಿನ ಜನನವಾಗಿರುತ್ತದೆ.

## ದಿಶಾ ರಾವ್



ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ಬೆಂಗಳೂರು ವತಿಯಿಂದ ನಡೆದ ಶಾಸ್ತ್ರೀಯ ವಾದ್ಯಸಂಗೀತ (ವೀಣೆ) ಪರೀಕ್ಷೆಯಲ್ಲಿ ದಿಶಾ ರಾವ್ ಉಡುಪಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಈಕೆ ಉಡುಪಿ ಕಡಿಯಾಳಿ ಭರತಾಂಜಲಿ ಸಂಗೀತ ಸಂಸ್ಥೆಯ ವಿದುಷಿ ಶ್ರೀಮತಿ ಸುಮಿತಾರವರ ಶಿಷ್ಯೆ. ಉಡುಪಿಯ ಸಂಗೀತ ತಜ್ಞ ಪ್ರಕಾಶ್ ರಾವ್-ಶ್ರೀಲತಾ ದಂಪತಿಗಳ ಪುತ್ರಿ. ಈಕೆ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ವಿದ್ಯಾರ್ಥಿ.

## ಚಂಡಿಕಾಹೋಮ

ತಾ.26-01-2016ರ ಮಂಗಳವಾರ ಶ್ರೀ ಹೆಚ್. ನಾಗೇಶ್ ರಾವ್ ದಂಪತಿಗಳು ತಮ್ಮ ಕುಟುಂಬದವರೊಡಗೂಡಿ ಪುತ್ತೂರು ಪಂಬತ್ತ ಮಜಲಿನ ತಮ್ಮ ನಿವಾಸ ಶ್ರೀ ದುರ್ಗಾಕೃಪಾದಲ್ಲಿ ಶ್ರೀ ಚಂಡಿಕಾ ಹೋಮವನ್ನು ವಿಜೃಂಭಣೆಯಿಂದ ನೆರವೇರಿಸಿದರು.

## ಬ್ರಹ್ಮೋಪದೇಶ

ತಾ.31-01-2016ನೇ ರವಿವಾರ ಮೈಸೂರಿನ ಶ್ರೀಮತಿ ಲಾವಣ್ಯ ಹಾಗೂ ಶ್ರೀ ಆದರ್ಶ್ ಇವರು ತಮ್ಮ ಪುತ್ರ ಚಿ। ಅರವಿಂದನ ಉಪನಯನ ಸಂಸ್ಕಾರವನ್ನು ಚಿಟ್ಪಾಡಿಯ ಶ್ರೀ ಸರಸ್ವತಿ ಸಭಾಭವನದಲ್ಲಿ ನೆರವೇರಿಸಿದರು.


With Best Compliments From :

Ph : 98459 92859

Ganesh Hebbar & Associates
CHARTERED ACCOUNTANT

S.M.S.P. Complex, Udupi - 576 101.

ಶುಭಾಶಯಗಳೊಂದಿಗೆ
ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ ಮೊಬೈಲ್ : 9821665609

ಯಶಸ್ವೀ ಎಂಟರ್‌ಪ್ರೈಸಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams

ಶ್ರೀ ಮಾತಾ ಜ್ಯೋತಿಷ್ಯಾಲಯ
ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)

Buying and selling shares
as easy as checking your emails

Sharekhan Online Trading Account Features:
⇨ Your bank account gets directly linked to trading account
⇨ Can do direct fund transfer from any of 11 leading banks
⇨ Choose your trading account, Classic, FastTrade, TradeTiger
⇨ Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)


ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ
ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

ವೇದಮೂರ್ತಿ ಚಿದಾನಂದ ಭಟ್
#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010
ಶ್ರೀ ಅಗಸ್ತ್ಯೇಶ್ವರ ದೇವಸ್ಥಾವದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ
ಮೊಬೈಲ್- 9886629697, 9986119865



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ಪ್ರೊ : ಸುಧಾಕರ್ ರಾವ್ ಬೆಳ್ಳೆ



ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ಮಹಾಪೋಷಕರಾಗಿ ಪಡುಬಿದ್ರಿ ಶ್ರೀ ಕೆ. ಅನಂತರಾಮ ಶಾಸ್ತ್ರಿ


ಶ್ರೀ ಕೆ. ಅನಂತರಾಮ ಶಾಸ್ತ್ರಿ ಹಾಗೂ ಶ್ರೀಮತಿ ವೀಣಾ



ಅರ್ಜುನ್ ಶಾಸ್ತ್ರಿ


ಅಚಲ್ ಶಾಸ್ತ್ರಿ

ಶ್ರೀ ಕೆ. ಅನಂತರಾಮ ಶಾಸ್ತ್ರಿಯವರು ಪಡುಬಿದ್ರಿಯಲ್ಲಿದ್ದ ಸುಪ್ರಸಿದ್ಧ ಪುರೋಹಿತರು, ನಾಗಪಾತ್ರಿ ಹಾಗೂ ಜ್ಯೋತಿಷ್ಕರಾಗಿದ್ದ ಕೆ. ಪದ್ಮನಾಭ ಶಾಸ್ತ್ರಿ ಮತ್ತು ಶ್ರೀಮತಿ ಮೀನಾಕ್ಷಿಯವರ ಮೂರನೇ ಪುತ್ರ. ತಮ್ಮ ವಿದ್ಯಾಭ್ಯಾಸವನ್ನು ಪಡುಬಿದ್ರಿ, ಅದಮಾರು, ಮುಲ್ಕಿ ಮತ್ತು ಮೈಸೂರಿನಲ್ಲಿ ಪೂರೈಸಿದ್ದಾರೆ. ಪಡುಬಿದ್ರಿಯ ಮಹಾಗಣಪತಿ ಹೈಸ್ಕೂಲಿನಲ್ಲಿ 1972ರಲ್ಲಿ ಎಸ್ಎಸ್ಎಲ್ಸಿಯಲ್ಲಿ ರಾಜ್ಯಕ್ಕೆ 13ನೇ ರ್‍ಯಾಂಕ್ ಮತ್ತು 1979ರಲ್ಲಿ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಎಮ್.ಎಸ್ಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಪಾಸು ಮಾಡಿದ್ದಾರೆ.

1980ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಉದ್ಯೋಗ ಆರಂಭಿಸಿ ಭದ್ರಾವತಿ, ಪಿರಿಯಾಪಟ್ಟಣ, ಹರಿಹರ, ಸಾಲಿಗ್ರಾಮ, ಮುಂಬೈ, ಇತ್ಯಾದಿ ಊರುಗಳಲ್ಲಿ ಬ್ಯಾಂಕಿನ ವಿವಿಧ ಹುದ್ದೆಗಳನ್ನು ನಿಭಾಯಿಸಿ ಈಗ ಬೆಂಗಳೂರಿನ ಮುಖ್ಯ ಶಾಖೆಯಲ್ಲಿ ಚೀಫ್ ಮೆನೇಜರ್ ಆಗಿ ತಮ್ಮ ಉದ್ಯೋಗದ ಕೊನೆಯ ಹಂತವನ್ನು ಪೂರೈಸುತ್ತಾ ಇದ್ದಾರೆ. ಇವರ ಪತ್ನಿ ಶ್ರೀಮತಿ ವೀಣಾ ಮಡಿಕೇರಿ ಕಟ್ಟೆಮಾಡಿನಲ್ಲಿರುವ ಶ್ರೀ ಎಮ್.ಆರ್. ಮೋಹನರಾವ್ ಮತ್ತು ಶ್ರೀಮತಿ ಪದ್ಮಾವತಿಯವರ ಪುತ್ರಿ. ತಾ.26-02-1986ರಂದು ಇವರ ವಿವಾಹ. ಅರ್ಜುನ್ ಶಾಸ್ತಿ ಮತ್ತು ಅಚಲ್ ಶಾಸ್ತಿಯವರ ತಂದೆ. ಇಬ್ಬರು ಪುತ್ರರೂ ಇಂಜಿನಿಯರ್ಆಗಿದ್ದು ಅರ್ಜುನ್ ಶಾಸ್ತ್ರಿ ಶಾರ್ಪ್ ಕಂಪನಿಯಲ್ಲಿ ಸೀನಿಯರ್ ಟೆರಿಟರಿ ಮ್ಯಾನೇಜರ್ ಮತ್ತು ಅಚಲ್ ಶಾಸ್ತ್ರಿ ಜಿಂಗನಮ್ ಟೆಕ್ನಾಲಜೀಸ್‌ನಲ್ಲಿ ಜ್ಯೂನಿಯರ್ ಇಂಜಿನಿಯರ್ ಆಗಿ ಬೆಂಗಳೂರಿನಲ್ಲಿ ಉದ್ಯೋಗ ಮಾಡುತ್ತಾ ಇದ್ದಾರೆ. ಶ್ರೀ ಅನಂತರಾಮ ಶಾಸ್ತ್ರಿಯವರು ಓದಿನಲ್ಲಿ ಹೇಗೆ ಮುಂದೆ ಇದ್ದರೋ ಅದೇ ರೀತಿ ಕ್ರೀಡೆ, ಸಂಗೀತ, ಸಾಹಿತ್ಯ, ಇತ್ಯಾದಿ ಎಲ್ಲಾ ಪಠ್ಯೇತರ ಚಟುವಟಿಕೆಗಳಲ್ಲೂ ಮುಂದಿದ್ದು ತಮ್ಮ ಆರಂಭದ ದಿನಗಳಲ್ಲಿ ಅನೇಕ ಲೇಖನಗಳನ್ನು ಬರೆದಿದ್ದು, ನಾಟಕಗಳಲ್ಲಿ ಹಾಡಿದ್ದು, ಹೆಚ್ಚಿನ ಪತ್ರಿಕೆಗಳಲ್ಲಿ ಕನ್ನಡ ಪದಬಂಧವನ್ನು ಬಿಡಿಸಿದ್ದಾರೆ. ಮುಂದೆ ಜವಾಬ್ದಾರಿಯುತ ಹುದ್ದೆಗಳನ್ನು ನಿರ್ವಹಿಸಿದ ಕಾರಣ ಈ ಹವ್ಯಾಸಗಳು ಕಡಿಮೆಯಾಗಿದ್ದರೂ, ಮುಂದೆ ತಮ್ಮ ವಿಶ್ರಾಂತ ಜೀವನದಲ್ಲಿ ಎಲ್ಲಾ ಉತ್ತಮ ಹವ್ಯಾಸಗಳನ್ನು ಮುಂದುವರೆಸುವ ಹಂಬಲ ಇಟ್ಟುಕೊಂಡಿದ್ದಾರೆ. ಬ್ಯಾಂಕಿನ ಎಲ್ಲಾ ಪ್ರಮೋಶನ್ ಪರೀಕ್ಷೆಗಳನ್ನು ಒಂದೇ ಪ್ರಯತ್ನದಲ್ಲಿ ಪಾಸು ಮಾಡಿದ ಹಿರಿಮೆ ಇವರದು. ಶ್ರೀಯುತರು ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದಲ್ಲೂ ಸಕ್ರಿಯರಾಗಿದ್ದು ಅನೇಕ ಸಂಘ-ಸಂಸ್ಥೆಗಳಿಗೆ, ಪತ್ರಿಕೆಗಳಿಗೆ, ದೇವಾಲಯಗಳಿಗೆ, ಅಪಾರ ದೇಣಿಗೆಯನ್ನು ಕೊಟ್ಟು ತಮ್ಮ ಕುಟುಂಬದಲ್ಲಿಯೂ ಕಷ್ಟದಲ್ಲಿರುವವರಿಗೆ ಸಹಾಯ ಮಾಡುತ್ತಾ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಇವರು ಪ್ರಸ್ತುತ ಅಲೆವೂರಿನಲ್ಲಿ ನೆಲೆಸಿರುವ ದೇವರಾಯ ಶಾಸ್ತ್ರಿಯವರ ಕಿರಿಯ ಸಹೋದರ. ಇವರಿಗೆ ಹಾಗೂ ಇವರ ಪತ್ನಿ, ಪುತ್ರರು ಮತ್ತು ಕುಟುಂಬದವರಿಗೆ ಶ್ರೀಶಾರದಾ ಮಾತೆಯು ಹರಸಿ ಸಲಹಲಿ ಎಂದು ಶಾರದಾ ಬಳಗವು ಪ್ರಾರ್ಥಿಸುತ್ತದೆ.

## ಶ್ರೀಶಾರದಾ ಟ್ರೋಫಿಗೆ ಪ್ರೋತ್ಸಾಹಿಸಿದ ಮಹನೀಯರು



**ಶ್ರೀ ಡಾ| ಪರೀಕ ಗೋಪಾಲಕೃಷ್ಣ ರಾವ್** - ನಮ್ಮ ಸಮಾಜದ ಹಿರಿಯ ವೈದ್ಯರಾದ ಶ್ರೀ ಡಾ| ಪರೀಕ ಗೋಪಾಲಕೃಷ್ಣ ರಾವ್ ಇವರು ಪರೀಕ ರಾಮ ರಾವ್ ಹಾಗೂ ಸತ್ಯಮ್ಮರವರ ಪುತ್ರ. ಶ್ರೀಮತಿ ಲೀಲಾ (ಅಲೆವೂರು ರಾಮಪ್ಪಯ್ಯನವರ ಪುತ್ರಿ)ರವರು ಇವರ ಪತ್ನಿ. ಇವರು ಬಿ.ಎಸ್ಸಿ. ಹಾಗೂ ಅರವತ್ತರ ದಶಕದಲ್ಲಿ ಎಮ್.ಬಿ.ಬಿ.ಎಸ್ (ಕೆ.ಎಂ.ಸಿ. ಮಣಿಪಾಲ) ಪದವಿ ಪಡೆದವರು. ನಂತರ ಮುಂಬಯಿಯ ಸಯಾನ್ ಕೋಳೀವಾಡದಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಾ ಜನಪ್ರಿಯರಾಗಿದ್ದಾರೆ. ಮುಂಬಯಿಯ ಸೌತ್ ಕೆನರಾ ಬ್ರಾಹ್ಮಿನ್ಸ್ ಅಸೋಸಿಯೇಶನ್ ಹಾಗೂ ನಮ್ಮ ಸಮಾಜದ ಸಂಘಗಳಲ್ಲಿ ಸಕ್ರಿಯರು. ಕೊಡುಗೈ ದಾನಿ ಹಾಗೂ ಅತೀವ ಧಾರ್ಮಿಕ ಶ್ರದ್ಧೆಯುಳ್ಳವರು ಹಾಗೂ ಆಧ್ಯಾತ್ಮಿಕ ದೃಷ್ಟಿಕೋನ ಹೊಂದಿದ ವ್ಯಕ್ತಿತ್ವ ಅವರದು. ಇವರು ಸಂಘದ ಕ್ರೀಡಾ ಚಟುವಟಿಕೆಗಳಿಗಾಗಿ ಮೀಸಲಾಗಿ ನಿಧಿಯೊಂದನ್ನು ಸ್ಥಾಪಿಸುವಂತೆ ಹುರಿದುಂಬಿಸಿ ಆರಂಭಿಕ ದೇಣಿಗೆಯಾಗಿ ರೂಪಾಯಿ ಹತ್ತುಸಾವಿರವನ್ನು ಕೊಡಮಾಡಿರುತ್ತಾರೆ. ಇಬ್ಬರು ಗಂಡು ಹಾಗೂ ಓರ್ವ ಹೆಣ್ಣು ಮಕ್ಕಳೊಂದಿಗೆ ಮುಂಬಯಿಯಲ್ಲಿ ನೆಲೆಸಿರುವ ಡಾ| ಪಿ.ಜಿ.ರಾಯರಿಗೆ ಶ್ರೀಶಾರದೆಯು ಸಕಲೈಶ್ವರ್ಯಗಳನ್ನು ದಯಪಾಲಿಸ ಲೆಂದು ಆಡಳಿತ ಮಂಡಳಿ ಪ್ರಾರ್ಥಿಸುತ್ತದೆ ಹಾಗೂ ಅವರ ಕೊಡುಗೆಗಾಗಿ ಧನ್ಯವಾದವನ್ನು ಸಮರ್ಪಿಸುತ್ತದೆ.

**ಅಲೆವೂರು ಶ್ಯಾಮರಾವ್** - ತಮ್ಮ ಮಾತಾಪಿತರಾದ ಶ್ರೀ ಅಲೆವೂರು ಭುಜಂಗರಾವ್ ಹಾಗೂ ಶ್ರೀಮತಿ ಶಾಂತಾದೇವಿಯವರ ನೆನಪಿನಲ್ಲಿ ಅವರ ಪುತ್ರರಾದ ಶ್ರೀ ಅಲೆವೂರು ಶ್ಯಾಮರಾಯರು ರೂಪಾಯಿ ಹತ್ತುಸಾವಿರಗಳನ್ನು ಶಾರದಾ ಟ್ರೋಫಿಗಾಗಿ ದೇಣಿಗೆಯಾಗಿತ್ತಿದ್ದಾರೆ. ದಿ| ಭುಜಂಗರಾಯರು ಶಿಕ್ಷಕರು ಹಾಗೂ ಕೃಷಿಕರಾಗಿದ್ದವರು. ಅವರ ಸ್ಮರಣಾರ್ಥ ಹಲವಾರು ವರ್ಷಗಳಿಂದ ಶಾರದಾ ಟ್ರೋಫಿಯನ್ನು ಪ್ರೋತ್ಸಾಹಿಸುತ್ತಿರುವ ಶ್ರೀ ಶ್ಯಾಮರಾವ್ ಹಾಗೂ ಶ್ರೀ ಮತಿ ಸಾವಿತ್ರಿ ದಂಪತಿಗಳಿಗೆ ಆಡಳಿತ ಮಂಡಳಿಯ ಕೃತಜ್ಞತೆಗಳನ್ನು ಅರ್ಪಿಸುತ್ತದೆ.

**ಡಾ| ಬಿ.ಹೆಚ್. ರಾಘವರಾವ್** - ಬಪ್ಪನಾಡಿನ ಪ್ರಸಿದ್ಧ ವೈದ್ಯ, ಆಯುರ್ವೇದ ತಜ್ಞ, ಮೂಲ್ಕಿ ಪಂಡಿತರೆಂದೇ ಹೆಸರುವಾಸಿಯಾದ ಪಂಡಿತ ವಾಸುದೇವರಾಯರ ಪುತ್ರರಾದ ಡಾ| ಬಿ.ಎಚ್. ರಾಘವರಾಯರು ಶ್ರೀಶಾರದಾ ಟ್ರೋಫಿಯ ಉತ್ತಮ ದಾಂಡಿಗ, ಅತ್ಯುತ್ತಮ ಬೌಲರ್ ಹಾಗೂ ಅತ್ಯುತ್ತಮ ಆಲ್‌ರೌಂಡರ್ ಪ್ರಶಸ್ತಿಗಳನ್ನು ಪ್ರಾಯೋಜಿಸಿದ್ದಾರೆ. ಇವರು ಕಳೆದ ಹಲವಾರು ವರ್ಷಗಳಿಂದ ಸತತವಾಗಿ ಶ್ರೀ ಶಾರದಾ ಟ್ರೋಫಿಯನ್ನು ಪ್ರೋತ್ಸಾಹಿಸುತ್ತಿದ್ದಾರೆ. ಅವರಿಗೆ ಆಡಳಿತ ಮಂಡಳಿಯ ಕೃತಜ್ಞತೆಗಳು.

## ಶ್ರದ್ಧಾಂಜಲಿ



**ಶ್ರೀಮತಿ ಎನ್. ರಮಾದೇವಿ**
(ಕೀರ್ತಿಶೇಷ ಶಿವರಾಯರ ಧರ್ಮಪತ್ನಿ)
ದುರ್ಗಾನಿವಾಸ, ಪಡುಬಿದ್ರಿ.

ಜನನ : 16-12-1932 ಮರಣ : 11-01-2016

ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನಲ್ಲಿ
ಚಿರಶಾಂತಿಯನ್ನು ಕೋರುವ

**ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು**
**ಮತ್ತು ಬಂಧುಮಿತ್ರರು.**
ವಿರಾಜಪೇಟೆ ಮತ್ತು ಪಡುಬಿದ್ರಿ



ಡಾ| ವೈ. ಸುದರ್ಶನ್ ರಾವ್ ರೋಟರಿ ಕ್ಲಬ್‌ಗೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಫೋಟೋ


ಉಡುಪಿ ಸಂಘದ ಪ್ರವಾಸದ ಫೋಟೋ (ಕೃಪೆ ಸುರೇಶ್ ರಾವ್ ಶ್ಯಾನುಭಾಗ್)


ಶಾರದಾ ಟ್ರೋಫಿಯ ಪ್ರಥಮ ಸ್ಥಾನಿ ಬೆಂಗಳೂರು ತಂಡ


ಶಾರದಾ ಟ್ರೋಫಿಯ ದ್ವಿತೀಯ ಸ್ಥಾನಿ ಪಡುಬಿದ್ರಿ ತಂಡ

## ಫೋಟೋ ಆಲ್ಬಂ


ಪೇಜಾವರ ಶ್ರೀ ಶ್ರೀಗಳ ಭೇಟಿಯ ಫೋಟೋ


ಪಡುಬಿದ್ರಿ ಸಂಘದ ಪ್ರವಾಸದ ಫೋಟೋ

## ಮಠಂತಬೆಟ್ಟು ದೇವಸ್ಥಾನಕ್ಕೆ ಉಡುಪಿಯಿಂದ ಹೊರೆಕಾಣಿಕೆ





ಬ್ರಹ್ಮಕಲಶೋತ್ಸವದ ಸಂಭ್ರಮದಲ್ಲಿದ್ದ ಮಠಂತಬೆಟ್ಟುವಿನ ಶ್ರೀ ರಾಜರಾಜೇಶ್ವರೀ ದೇವಸ್ಥಾನಕ್ಕೆ ಉಡುಪಿಯಿಂದ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ವತಿಯಿಂದ ಹೊರಕಾಣಿಕೆ ಸಮರ್ಪಿಸಲಾಯಿತು. ತಾ.20-01-2016ರಂದು ಉಡುಪಿಯಿಂದ ಹೊರಟು ಸಂಜೆ ಮೂರು ಗಂಟೆಗೆ ತಲುಪಿ ದೇವಳದ ಸಮಿತಿಯ ಅಧ್ಯಕ್ಷರಾದ ಶ್ರೀ ಜಗನ್ನಿವಾಸ ರಾಯರು ಹಾಗೂ ಶ್ರೀ ನಾಗೇಶ ಶರ್ಮರ ಉಪಸ್ಥಿತಿಯಲ್ಲಿ ಹೊರಕಾಣಿಕೆ ಸಮರ್ಪಿಸಿದರು. ದೇವರ ದರ್ಶನ ಮಾಡಿ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದು ಹಿಂತಿರುಗಿದರು. ಶ್ರೀ ವೈ.ಭುವನೇಂದ್ರ ರಾವ್ ಶ್ರೀ ವೈ ಸುದರ್ಶನ್ ರಾವ್, ಶ್ರೀ ಜಯರಾಮ ರಾವ್ ಶ್ರೀ ಐ.ಕೆ.ಜಯಚಂದ್ರ ಶ್ರೀ.ಕೆ.ಸುಧಾಕರ ರಾವ್, ಶ್ರೀಮತಿ ರೋಹಿಣಿ ಹಾಗೂ ಶ್ರೀಮತಿ ಜಯಶ್ರೀಯವರು ಭಾಗವಹಿಸಿದರು.

## ಎರ್ಮಾಳು ವಾಸುದೇವರಾಯರು ರಚಿಸಿದ ಯಕ್ಷಗಾನ ಪ್ರಸಂಗ ಪ್ರದರ್ಶನ





ತಾ.04-01-2016ರಂದು ಅದಮಾರಿನಲ್ಲಿ ಶ್ರೀ ವೈ. ವಾಸುದೇವ ರಾವ್ ರಚಿಸಿದ ಯಕ್ಷಗಾನ ಪ್ರಸಂಗಗಳಾದ 'ದೂರ್ವ ಗಣಪತಿ', 'ರಾಮಾಂಜನೇಯ' ಹಾಗೂ 'ಚಂದ್ರಾವಳಿ ವಿಲಾಸ'ವನ್ನು ಸಾಲಿಗ್ರಾಮ ಮೇಳದವರು ಆಡಿ ತೋರಿಸಿದರು. ಈ ಸಂದರ್ಭದಲ್ಲಿ ಪ್ರಸಂಗಕರ್ತ ವೈ.ವಾಸುದೇವರಾವ್ ಅವರನ್ನು ಶಿವಾನಂದ ಪೈಯವರು ಗೌರವಿಸಿದರು. ನಂತರ ಆರ್ಗೋಡು ಮೋಹನದಾಸ ಶೆಣೈ, ರಾಘವೇಂದ್ರ ಮಯ್ಯ ಹಾಗೂ ನಮ್ಮ ಸಮಾಜದವರಾದ ಕೋಟ ಶಿವಾನಂದ, ಸಿತ್ಲ ರಂಗನಾಥರವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಶಿವಾನಂದ ಪೈ ಹಾಗೂ ಕೆ.ಎಲ್.ಕುಂಡಂತಾಯರು ಅತಿಥಿಗಳಾಗಿ ಉಪಸ್ಥಿತರಿದ್ದರು. ಶ್ರೀ ವೈ. ಸುದರ್ಶನ್ ರಾವ್, ಅದಮಾರು ಹಾಗೂ ಶ್ರೀ ವೈ. ಸತೀಶ್ ರಾವ್ ಕಾರ್ಯಕ್ರಮ ಸಂಯೋಜಿಸಿದ್ದರು. ಈ ಕಾರ್ಯಕ್ರಮಗಳನ್ನು ಎರ್ಮಾಳು ವಾಸುದೇವರಾವ್ ಕುಟುಂಬಸ್ಥರು ನೆರವೇರಿಸಿದರು.


## ಯಶಸ್ವೀ ಎಂಟರ್‌ಪ್ರೈಸಸ್‌ನ ಉದ್ಘಾಟನೆ



ಶ್ರೀಮತಿ ಹಾಗೂ ಶ್ರೀ ಉದಯಚಂದ್ರ ರಾವ್ ನಂದಳಿಕೆ ಇವರು ಶಿರ್ವ ಸೈಂಟ್ ಮೇರಿಸ್ ಕಾಲೇಜಿನ ಎದುರು ಇರುವ ಶಾಂಭವಿ ಹೈಟ್ಸ್‌ನಲ್ಲಿ ತಮ್ಮ ನೂತನ ವ್ಯಾಪಾರ ಸಂಸ್ಥೆಯಾದ ಯಶಸ್ವಿ ಎಂಟರ್ ಪ್ರೈಸಸ್‌ನ ಉದ್ಘಾಟನೆಯನ್ನು ತಾ.26-01-2016ನೇ ಮಂಗಳವಾರ ನೆರವೇರಿಸಿದರು. ಅಂದು ನಂದಳಿಕೆ ಶ್ರೀ ಮಹಾಲಿಂಗೇಶ್ವರ ಅನುದಾನಿತ ಶಾಲೆ ನಂದಳಿಕೆಯ ಮುಖ್ಯ ಶಿಕ್ಷಕರಾದ ಶ್ರೀ.ವಿ.ಕೆ.ರಾವ್‌ರಿಗೆ ಸನ್ಮಾನಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ರೇ.ಫಾ। ಸ್ಟ್ಯಾನ್ಲಿ ತೌರೋ ಹಾಗೂ ಶ್ರೀ ಪಿ.ಎನ್.ಗಣೇಶ್ (ಕರ್ನಾಟಕ ಲೋಕಾಯುಕ್ತ) ಆಗಮಿಸಿದ್ದರು. ಶ್ರೀ ನಂದಳಿಕೆ ಬಾಲಚಂದ್ರ ರಾಯರು ಕಾರ್ಯಕ್ರಮ ನಿರ್ವಹಿಸಿದರು.

## ಮಠಂತಬೆಟ್ಟಿನ ಶ್ರೀ ರಾಜರಾಜೇಶ್ವರಿಗೆ ಬ್ರಹ್ಮಕಲಶಾಭಿಷೇಕ







**ಫೋಟೋ ಕೃಪೆ : ಸುದರ್ಶನ್‌ರಾವ್, ಪದ್ಮ ಸ್ಟುಡಿಯೋ, ಪುತ್ತೂರು**


ಪುತ್ತೂರು ತಾಲೂಕಿನ ಮಠಂತ ಬೆಟ್ಟುವಿನ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಸಕಲ ಜೀರ್ಣೋದ್ಧಾರ ಕಾರ್ಯಗಳು ಮುಗಿದಿದ್ದು ತಾ. 17-01-2016ರಿಂದ ತಾ.24-01-2016ರ ತನಕ ಒಂದು ವಾರಗಳ ಕಾಲ ಬ್ರಹ್ಮಕಲಶಾಭಿಷೇಕ ಹಾಗೂ ಪುನಃಪ್ರತಿಷ್ಠೆ ಕಾರ್ಯಕ್ರಮಗಳು ವಿವಿಧ ಗಣ್ಯರ ಆಗಮನ, ಧಾರ್ಮಿಕ ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳು ಕ್ಷೇತ್ರದ ತಂತ್ರಿಗಳು. 17-01-2016ರಂದು ಮೂಲಬಿಂಬ ಶುದ್ಧಿ, 19-01-2016ರಂಗ ವಾಸ್ತು ಹೋಮ ನಡೆಯಿತು. 20-01-2016ರಂದು ಕೋದಂಡಾಶ್ರಮದ ಶ್ರೀಶ್ರೀ ಮಾಧವಾಶ್ರಮ ಸ್ವಾಮಿಜಿಯವರು ಆಗಮಿಸಿ ಅವರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯರು ವಾರದುದ್ದಕ್ಕೂ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಸೂಚನೆಗಳನ್ನೂ ನೀಡಿದರು. 21-01-2016ರಂದು ಬೆಂಗಳೂರಿನ ಸ್ಥಾನಿಕ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಎ.ಶಿವರಾವ್‌ರವರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ ಹಾಗೂ 22-01-2016 ಶುಕ್ರವಾರ ಶ್ರೀಕೆ.ಪ್ರಭಾಕರ ರಾವ್‌ರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ ಜರಗಿತು. 21-01-2016ರಂದು ಧರ್ಮಸ್ಥಳದ ಶ್ರೀ ವಿರೇಂದ್ರ ಹೆಗ್ಗಡೆಯವರು ಆಗಮಿಸಿ ಮೆಚ್ಚುಗೆ ಸೂಚಿಸಿದರು. 24-01-2016 ನೇ ಆದಿತ್ಯವಾರ ಬೆಳಿಗ್ಗೆ ಶ್ರೀದೇವಿಗೆ ಸುವರ್ಣ ಹಾಗೂ ರಜತ ಕಲಶಗಳಿಂದ ಬ್ರಹ್ಮ ಕುಂಬಾಭಿಷೇಕ,ಧಾರ್ಮಿಕ ಪ್ರವಚನ, ಮಧ್ಯಾಹ್ನ ಅನ್ನ ಸಂತರ್ಪಣೆ ನೆರವೇರಿತು. ಸಂಜೆ ಶ್ರೀ ರಮಾನಾಥ ರೈಗಳ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮವಿತ್ತು. ಸಾವಿರಾರು ಸಮಾಜ ಬಾಂಧವರು, ಊರವರು ಹಾಗೂ ಭಕ್ತರು ಕಾರ್ಯಕ್ರಮದ ಯಶಸ್ಸಿಗೆ ಕಾರಣೀಭೂತರಾಗಿದ್ದರು. ಅವರೆಲ್ಲರಿಗೂ ಆಡಳಿತ ಮಂಡಳಿಯ ಪರವಾಗಿ ಶ್ರೀ ನಾಗೇಶ ಶಿರೂರು ಕೃತಜ್ಞತೆಗಳನ್ನು ಅರ್ಪಿಸಿದರು.

## ಚಿಣ್ಣರ ಅಂಗಳ



ಅದಿತಿ, 5ನೇ ತರಗತಿ, ಎಸ್.ಬಿ.ವಿ.ಎಸ್. ಶಾಲೆ, ಕಾರ್ಕಳ



ಶರಧಿ, 8ನೇ ತರಗತಿ
ಸರಕಾರಿ ಮಹಿಳಾ ಪಿಯು ಕಾಲೇಜು, ಉಡುಪಿ



ಅನನ್ಯ ಕೆ.ರಾವ್
2ನೇ ತರಗತಿ, ಲಾರ್ಡ್ಸ್ ಸೆಂಟ್ರಲ್ ಸ್ಕೂಲ್, ಮಂಗಳೂರು.


**With Best Compliments From :**



SMT. VIDYA & SRI K. VASUDEVA RAO

*Deepika Digital Studio & Video*
*Deepika International Travels*

WE UNDERTAKE

- Studio Portrait
- Digital Creation
- Outdoor Photography Making
- Digital Albums
- Video Coverage (Cinematography)
- Lamination & Frames
- Led Wall, Crane & Spot Mixing
- Air Ticket (Domestic & International)
- Passport Assistance
- Train Tickets
- Bus Tickets
- Attestation Certificate
- Western Union
- Emigration (ECNR)

Opp. Kediyoor Hotel, Near Service Bus Stand, Udupi - 576 101.
E-mail : deepika.tra@gmail.com
Ph : 0820-2520652 / 4295862 Mobile : 9845177795 / 9845650449


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@gmail.com Website : www.srisharada.org